# ಕೊಪ್ಪಳ ಜಿಲ್ಲೆಯ ಪರಿಚಯ

ಐತಿಹಾಸಿಕವಾಗಿ ಶ್ರೀಮಂತಿಕೆ ಮೆರೆದ ಜಿಲ್ಲೆಯ ಗತಕಾಲದ ವೈಭವ ಮತ್ತು ಸಂಸ್ಕೃತಿ, ಸಾಮಾಜಿಕ, ಸಾಹಿತ್ಯಿಕ ಇತಿಹಾಸ ತಿಳಿದುಕೊಳ್ಳುವದು ಅತ್ಯಂತ ಪ್ರಮುಖವಾದದ್ದು. ಈ ದಿಶೆಯಲ್ಲಿ ತಿರುಳ್ಗನ್ನಡ ನಾಡು ಎಂದು ಪರಿಚಿತವಾದ ಕೊಪ್ಪಳ ಜಿಲ್ಲೆಯ ಬಗ್ಗೆ ಇಂದಿನ ಮಕ್ಕಳು ಯುವಜನಾಂಗ ಹಾಗೂ ನಾಗರಿಕ ಸಮುದಾಯ ತಿಳಿದುಕೊಳ್ಳಬೇಕಾದ ದೃಷ್ಟಿಯಿಂದ ಶಿಕ್ಷಣ ಇಲಾಖೆಯ ಚಿಣ್ಣರ ಜಿಲ್ಲಾ ದರ್ಶನ ಕಾರ್ಯಕ್ರಮ ಒಂದು ಸಣ್ಣ ಪ್ರಯತ್ನವಾಗಿದೆ. ಸರ್ವಧರ್ಮ ಸಮನ್ವಯತೆ, ಕರ್ನಾಟಕ ಇತಿಹಾಸದ ಹೆಗ್ಗುರುತು, ಕೆಚ್ಚೆದೆಯ ಹೋರಾಟಗಳು ಇಲ್ಲಿ ಕಾಣಸಿಗುತ್ತವೆ.

ಕಾವೇರಿಯಿಂದ ಮಾ ಗೋ | ದಾವರಿವರ ಮಿರ್ದು ನಾಡದಾ ಕನ್ನಡದೊಳ್|
ಭಾವಿಸಿದ ಜನಪದಂ ವಸು |
ಧಾವಲಯವಿಲೀನ ವಿಶದ ವಿಷಯ ವಿಶೇಷಂ | ಅದರೊಳಗಂ ಕಿಸುವೊಳಲಾ
ವಿದಿತ ಮಹಾಕೊಪಣಾನಗರದಾ ಪುಲಿಗೆರೆಯಾ
ಸದಭಿಸ್ತುತಮ್ಪೊಂಕುಂ ದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್

ಶ್ರೀ ವಿಜಯ ರಚಿಸಿರುವ ಕವಿರಾಜ ಮಾರ್ಗದ ಈ ನುಡಿ ಕೊಪ್ಪಳದ ಇತಿಹಾಸದ ಘನತೆಯನ್ನು ಹೇಳುತ್ತದೆ. ಇದು ಪ್ರಾಚೀನ ಕಾಲದ ಜೈನರ ಬೌದ್ಧ ಧರ್ಮಗಳ ವಾಸಸ್ಥಳವಾಗಿತ್ತು ತರುವಾಯ ವೀರಶೈವ ಧರ್ಮದ ಛಾಪು ಬಂದಿದೆ ಅನೇಕ ಏಳು ಬೀಳನ್ನು ಈ ಸ್ಥಳ ಹೊಂದಿದೆ. ಪುರಾಣ ಕಾಲದಿಂದಲೂ ಅರ್ಜುನ ಶಿವನಿಂದ ಪಾಶುಪತಾಸ್ತ್ರ ಪಡೆದಿರುವ ಮತ್ತು ತಪಸ್ಸನ್ನು ಮಾಡಿರುವ **"ಇಂದ್ರಕೀಲ ಪರ್ವತ'** ಇಲ್ಲಿಯೇ ಇರುವದು. ಅರ್ಜುನನು ಮಳಲು ಲಿಂಗವನ್ನು ಪೂಜಿಸಲು ಈಶ್ವರನು ಪ್ರತ್ಯಕ್ಷನಾದನು. ಇದೇ ಇಂದು **ಮಳೆ ಮಲ್ಲೇಶ್ವರ** ಎಂದು ಪ್ರಸಿದ್ದಿಯಾಗಿದೆ. ಪಾಂಡವರು ಕೂಡಾ ಇಲ್ಲಿ ಬಿಡಾರ ಮಾಡಿದ್ದರು. ಇದನ್ನು **"ಪಾಂಡವರ ವಠಾರ'**ವೆಂದು ಇಂದಿಗೂ ಇದನ್ನು ಕರೆಯಲಾಗುತ್ತದೆ.

ಇಲ್ಲಿ ದೊರೆತ ತಲೆಬುರುಡೆ ಮಣ್ಣಿನ ಪಾತ್ರೆ ಆಯುಧ ಮೊದಲದ ಪ್ರಾಚೀನ ಕಾಲದ ಮಾನವರ ವಾಸಸ್ಥಾನವಾಗಿತ್ತೆಂದು ಸಾಕ್ಷಿ ಹೇಳುತ್ತದೆ. ಇಲ್ಲಿಯ ಸುಪ್ರಸಿದ್ಧವಾದ ಗವಿಮಠದ ಮೇಲಿನ ಗುಹೆಗಳಲ್ಲಿ ಶಿಲಾಯುಗದ ಆದಿ ಮಾನವರ ವರ್ಣರಂಜಿತ ಚಿತ್ರಗಳು ದೊರೆತಿವೆ ಮೌರ್ಯರ ಅಗಸಿಯ ಬಂಡೆಯ **"ಬಯಲುಶಾಸನ'** ಮೊದಲಾದವು ಈ ಸ್ಥಳದ ಇತಿಹಾಸವನ್ನು ಸಾರಿ ಹೇಳುತ್ತವೆ. ಇಲ್ಲಿ ದೊರೆಯುವ ಶಾಸನಗಳು **"ದೇವನಾಂಪ್ರಿಯಾ ಪ್ರೀಯದರ್ಶಿ'** ಎನ್ನುವ ಸಾರವನ್ನು ಅಶೋಕನ ಬಗ್ಗೆ ಸಾರಿ ಹೇಳುತ್ತವೆ. ಮೌರ್ಯರ ತರುವಾಯ ಈ ನಾಡು ಶಾತವಾಹನರ ಆಳ್ವಿಕೆ ಒಳಪಟ್ಟು ೫೫೦ ವರ್ಷಗಳ ಕಾಲ ಆಳ್ವಿಕೆಯನ್ನು ಮಾಡಿದ್ದು ಇತಿಹಾಸದಲ್ಲಿ ದೊರೆತಿದೆ. ಕೃಷ್ಣ ಮಹಾರಾಷ್ಟ್ರದಿಂದ ಪೂರ್ವದವರೆಗೆ ಆಳಿದರೆಂದು ರಾಜಾಸೂಯಾ ಯಾಗವನ್ನು ಮಾಡಿದರೆಂದು ಹಿರೇಸಿಂದೋಗಿಯಲ್ಲಿ ಆಕಾಲದ ಬೆಳ್ಳಿ ನಾಣ್ಯದ ರಾಶಿಗಳಿಂದ ತಿಳಿದು ಬರುತ್ತದೆ.

ಕರ್ನಾಟಕದ ಇತಿಹಾಸಕ್ಕೆ ಒಂದು ನಿರ್ದಿಷ್ಟ ಇತಿಹಾಸವನ್ನು ಕೊಟ್ಟ ಎರಡನೇ ಪುಲಕೇಶಿಯ ಬಗ್ಗೆ ಹೋಯೆನ್ಸತಾಂಗ್ ಈ ಸ್ಥಳವನ್ನು **'ಕೊಂಕೊನ ಪೂಲೋಪ್'** ಎಂದು ಉಲ್ಲೇಖಿಸಿರುವನು ಇದು ಹಲಿಗೇರಿಯ ಶಾಸನದಿಂದ ತಿಳಿದು ಬರುವದು ಒಟ್ಟನಲ್ಲಿ ಕೊಪ್ಪಳದ ಬಗ್ಗೆ ಚಾಲುಕ್ಯರಲ್ಲಿ ಒಳ್ಳೆಯ ಆಡಳಿತವನ್ನು ನೀಡಿರುವ ವಿಜಯಾದಿತ್ಯನು ಉತ್ತಮವಾದ ಭಾವನೆಯನ್ನು ಹೊಂದಿದ್ದನು ಎಂದು ತಿಳಿದು ಬಂದಿದೆ.

ಚಾಲುಕ್ಯರ ತರುವಾಯ ಈ ನಾಡ ಕೀರ್ತಿಯನ್ನು ಉತ್ತುಂಗಕ್ಕೇರಿಸಿದವರು ಅಮೋಘ ವರ್ಷ ನೃಪತುಂಗ ಶ್ರೀವಿಜಯ ಮುಂತಾದವವರು ಈ ನಾಡನ್ನು ಹಾಡಿ ಹೊಗಳಿದ್ದಾರೆ ಆಳಿದ್ದಾರೆ.

ಇಲ್ಲಿರುವಂತಹ ಜನಪದ ಸಾಹಿತ್ಯದಲ್ಲಿ ಸುಪ್ರಸಿದ್ದ ಕೊಪ್ಪಳದ ಇತಿಹಾಸವು ಸಿಗುತ್ತದೆ. **"ಕಿಸುವೋಳಲ್, ಕೊಪ್ಪಣ ನಗರ, ಪುಲಿಗೇರಿ'** ಎನ್ನುವ ಊರುಗಳು ಈ ಸಾಹಿತ್ಯದಲ್ಲಿ ಸಿಗುತ್ತವೆ. ಈ ಊರುಗಳು ನಾಡಿನ ನಂದಾ ದೀವಿಗೆಯಾಗಿದ್ದವೆಂದು ಉಲ್ಲೇಖಿಸಲ್ಪಟ್ಟಿವೆ. ಕ್ರಿ,ಶ,೯೬೪ರಲ್ಲಿ ಉಪ್ಪಿನ ಬೆಟಗೇರಿಯ ಶಾಸನವು ರನ್ನನಿಂದ ಬರಯಲ್ಪಟ್ಟ ಶಾಸನದ ಪ್ರಕಾರ ಮಹಾಸಾಮಂತ ಪತಿಯಾದ ಶಂಕರ ಗಂಡನು ಕೊಪ್ಪಳದಲ್ಲಿ ಜಿನಾಲಯವನ್ನು ಕಟ್ಟಿಸಿದನೆಂದು ಹೇಳಿದೆ. ಆದ್ದರಿಂದ ರನ್ನನಿಗೆ ಜೈನ ಮತ ಪೋಷಕ ಎಂದು ಪಡೆದಿರುವದನ್ನು ಉಲ್ಲೇಖಿಸಬಹುದು. ಯಲಬುರ್ಗಿಯ ಸಿಂದ ಮನೆತನವು ಚಾಲುಕ್ಯರ ಸಾಮ್ರಾಜ್ಯವನ್ನು ಉಳಿಸಲು ಶಕ್ತಿ ಮೀರಿ ಪ್ರಯತ್ನಿಸಿ ಎರಡನೆಯ ಆಚರಸನು ವಿಷುವರ್ಧನನ್ನೆ ದೋರ ಸಮುದ್ರದ ವರೆಗೆ ಬೆನ್ನಟ್ಟಿಕೊಂಡು ಹೋದ ಬಗ್ಗೆ ಇಲ್ಲಿ ಶಾಸನಗಳು ಸಾರಿ ಹೇಳುತ್ತವೆ.

ಕುಕನೂರಿನ ಶಾಸನವು ಚಾಲುಕ್ಯರ ಬಗ್ಗೆ ಮನತುಂಬಿ ವರ್ಣನೆಯನ್ನು ಮಾಡಿದೆ. ಇನ್ನೊಂದು ಶಾಸನವು ಮಾದಿನೂರಿ ನಲ್ಲಿದೆ ಕಲೆ ಸಂಸ್ಕೃತಿಯೊಂದಿಗೆ ಗಾಢವಾದ ಸಂಬಂದವನ್ನು ಬೆಳೆಸಿಕೊಂಡ ಬಗ್ಗೆ ಶಾಂತಲೆ, ಗಂಗರಾಜನು ಗಂಗ ನಾಡಿ **೯೬ ಸಾಸಿರ ಕಲ್ಲು ಕೊಪಣವನ್ನು** ಕಟ್ಟಿಸಿದನೆಂದು ನಾರಸಿಂಹನ ಮಂತ್ರಿಯಿಂದ ಇತಿಹಾಸದಲ್ಲಿ ಕೊಪ್ಪಳದ ಕೀರ್ತಿ ಪತಾಕೆಯು ಹಾರಿತೆಂದು ತಿಳಿದು ಬರುವದು. ಮುಸಲ್ಮಾನರ ದಾಳಿಯನ್ನು ಎದುರಿಸುವಲ್ಲಿ ನಾಡೆ ಒಗ್ಗಟ್ಟಾಗಿ ನಿಂತಿದ್ದಲ್ಲದೇ ಆನೆಗುಂದಿಯ ಕಂಪಿಲರಾಮ ಮತ್ತು ಅವರ ಮಗ ಕುಮಾರ ರಾಮರು ಧೈರ್ಯವಾಗಿ ನಿಂತು ಹೋರಾಡಿದ್ದು ಐತಿಹಾಸಿಕ ಮಹ್ವತ್ವವಾಗಿದೆ. ಬಿಜಾಪುರದ ಆದಿಲ್ ಷಾಹಿ ಕಾಲದಲ್ಲಿ ಈ ಸ್ಥಳವನ್ನು **"ಮುಜಾಪರ್ ನಗರ'**ವೆಂದು ಕರೆಯುತ್ತಿದ್ದರು. ಎರಡನೆ ಆದಿಲ್‌ಷಾ ಆಡಳಿತದಲ್ಲಿ ಯಾಕೂಬ ನೆಂಬುವವನು ಈ ಭಾಗದ ಅಧಿಕಾರಿ ಇದ್ದನು, ಪ್ರತಿನಿಧಿ ಹುಸೇನ್‌ಮಿಯಾನನ್ನು ಬಂದಿಸಿ ಶಿವಾಜಿಯು ಕೊಪ್ಪಳ ಕೋಟೆಯನ್ನು ಬೇಡಿಕೆ ಇತ್ತಿದ್ದನು. ಮುಂದೆ ಶಿವಾಜಿ ಅದನ್ನು ಸುಭಾನ್ಜೀರಾವ್‌ನಿಗೆ ಕೊಟ್ಟನು.

ಕ್ರಿಶ ೧೭೯೯ರಲ್ಲಿ ಕರ್ನಲ್ ಕಿಡ್‌ನು ಸವಣೂರು, ಕೊಪ್ಪಳ ಬೆಂಗಳೂರು ಪಟ್ಟಣ ಹಿಡಿದಕೊಂಡನು. ಮುಂದೆ ಈ ಭಾಗದಲ್ಲಿ ವೀರಪ್ಪನೆಂಬ ಜಮೀನ್ದಾರನು ಈಸ್ಟ್ ಇಂಡಿಯಾದ ವಿರುದ್ಧ ಬಂಡೆದ್ದನು, ಮುಂಡರಗಿ ಭೀಮರಾಯ ಹಮ್ಮಗಿ ಕೆಂಚನ ಗೌಡರು ಬ್ರಿಟೀಷರ ವಿರುದ್ಧ ಹೋರಾಡಿದರು. ೧೮೫೭ರಲ್ಲಿ ಬ್ರಿಟೀಷರು ಇವರ ದಂಗೆಯನ್ನು ಬಗ್ಗು ಬಡಿದರು. ೧೮೬೧ರಲ್ಲಿ ಈ ಭಾಗವನ್ನು ಅವ್ವಲ್ನಿಗೆ ಜಾಗೀರಾಗಿ ಕೊಡಲ್ಪಟ್ಟಿತು. ಸ್ವತಂತ್ರ ದೊರೆಯುವವರೆಗೂ ಅವನ ಆದಿಪತ್ಯದಲ್ಲಿ ಇದ್ದಿತು. ಗವಿಮಠಕ್ಕೆ ಹೊಂದಿಕೊಂಡಿರುವ ಬೆಟ್ಟಗಳಲ್ಲಿ ಅಶೋಕನ ಶಾಸನವಿದ್ದು, ಇದರಿಂದ ಮೌರ್ಯರ ಸಾಮ್ರಾಜ್ಯ ವಿಸ್ತರಣೆ ತಿಳಿಯುತ್ತದೆ. ಶ್ರವಣಬೆಳಗೊಳದ ಶಾಸನಗಳು ಕೊಪ್ಪಳವನ್ನು **ಆದಿತೀರ್ಥ ಮಹಾತೀರ್ಥ** ಎಂದು ಬಣ್ಣಿಸಿವೆ. ತಪಸ್ಸಿಗೆಂದು, ಯಾತ್ರಗೆಂದು, ಸಲ್ಲೇಖನಕ್ಕೆಂದು ಬಂದವರು ಕೊಪಣಾಚಲದಲ್ಲಿ ಮುಕ್ತಿ ಹೊಂದದ್ದರೆಂದು **ಚಾವುಂಡರಾಯ ಪುರಾಣದಲ್ಲಿ** ಹೇಳಿದೆ. ಗವಿಮಠವು ಇರುವ ಬೆಟ್ಟವು ಕ್ರಿ,೧೫೬೦ರಲ್ಲಿ ಜೈನರ ಪ್ರಮುಖ ಸ್ಥಳವಾಗಿತ್ತು.

ಶಿಲ್ಪಕಲೆಯಲ್ಲಿ ಕೊಪ್ಪಳ ಜಿಲ್ಲೆ ಮಹತ್ವದ ಸ್ಥಾನವನ್ನು ಹೊಂದಿದೆ. ಕೋಟೆ ಕೊತ್ತಲಗಳು ಗಂಗರಾಜರ ಆದರ್ಶನಗರ ನಿರ್ಮಾಣಗಳ ಕಲ್ಪನೆಯಾಗಿದೆ. ಶಿವಾಲಯಗಳಲ್ಲಿ ಮಳೆಮಲ್ಲೇಶ್ವರ, ಗವಿಮಠ ಪ್ರಮುಖವಾದವು. **"ದೇವಾಲಯಗಳ ಚಕ್ರವರ್ತಿ'**ಎಂದು ಬಣ್ಣಿಸಿರುವ ಯಲಬುರ್ಗಾ ತಾಲೂಕಿನ ಇಟಗಿ **ಮಹಾದೇವ ದೇವಾಲಯ**ವು ಕೊಪ್ಪಳದಿಂದ ೨೦ ಕಿ.ಮಿ. ದೂರದಲ್ಲಿದೆ. ಹಳೆಬೀಡನ್ನು ಬಿಟ್ಟರೆ ಕರ್ನಾಟಕದಲ್ಲೆ ಅತ್ಯಂತ ಸುಂದರವಾದ ದೇವಾಲಯವೆಂದು ಇದನ್ನು ಕರೆಯಲಾಗಿದೆ. ಕುಕನೂರಿನ ಸುತ್ತ ಮುತ್ತ ಹಲವಾರು ದೇವಾಲಯಗಳಿದ್ದು ಬಿಜ್ಜಳನ ಹತ್ಯೆ ಮಾಡಿದ ಮೊಲ್ಲೆ ಬೊಮ್ಮಯ್ಯ ಯಲಬುರ್ಗಾ ತಾಲೂಕಿನ ರ್‍ಯಾವಣಕಿಯವರು. ಕಲ್ಲಿನಾಥ ದೇವಾಲಯವು ಕಲ್ಲೂರಿನಲ್ಲಿದೆ, ಕುಕನೂರಿನ ಗುದ್ನೆಪ್ಪನ ಮಠ ಐತಿಹಾಸಿಕವಾದುದಾಗಿದೆ.

ಆಗಿನ ಕಾಲದ ಅಗ್ರಹಾರಗಳು ಇಲ್ಲಿನ ಪ್ರಮುಖ ಶೈಕ್ಷಣಿಕ ತಾಣವಾಗಿದ್ದವು.

**ಸಂಪನ್ಮೂಲಗಳು:** ಬೆಟ್ಟಗುಡ್ಡಗಳ ಸಾಲು, ಶಿಲಾಶಾಸನಗಳು, ಕೋಟೆಕೊತ್ತಲಗಳು ಹಾಗೂ ಉರಿಬಿಸಿಲು - ಕೊಪ್ಪಳ ಜಿಲ್ಲೆಯ ವೈಶಿಷ್ಟ್ಯ. ಕಬ್ಬಿಣದ ಅದಿರು, ಬೆಣಚು, ಬಳಪದ ಕಲ್ಲು , ಬೂದು ಹಾಗೂ ಕೆಂಪು ಬಣ್ಣದ ಗ್ರಾನೈಟ್ ಎಂದೇ ಖ್ಯಾತಿ ಪಡೆದಿರುವ ಸೀಣೆ ಕಲ್ಲುಗಣಿಗಳು (ಕುಕನೂರು ಬಳಿ ) ಇಲ್ಲಿನ ಖನಿಜ ಸಂಪತ್ತು.

ಜಿಲ್ಲೆಯಲ್ಲಿ ಕಪ್ಪು ಹಾಗೂ ಕೆಂಪು ಮಣ್ಣು ಹೇರಳವಾಗಿದ್ದು, ಹತ್ತಿ ಸೂರ್ಯಕಾಂತಿ, ಕಬ್ಬು, ಗೋದಿ, ಜೋಳ, ಗೋವಿನ ಜೋಳ, ನೆಲಗಡಲೆ, ದಾಳಿಂಬೆ, ಪಪ್ಪಾಯಿ ಹಣ್ಣುಗಳ ಜೊತೆಗೆ ತರಕಾರಿ ಬೆಳೆಗಳ ಜೊತೆಗೆ ನೀರಾವರಿ ಜಮೀನು ಇಲ್ಲಿದೆ. ತುಂಗಾಭದ್ರಾ ಜಲಾಶಯ, ಹಿರೇಹಳ್ಳ ನೀರಾವರಿ ಯೋಜನೆ, ಗ್ರಾಮೀಣ ಪ್ರದೇಶದಲ್ಲಿನ ಜಿನುಗು ಕೆರೆ, ಬಾವಿಗಳು ಈ ಭಾಗದ ಜೀವಜಲವಾಗಿವೆ.

ಭಾರತದ ಬಹುತೇಕ ಜಾತಿಯ ಜನಾಂಗದ (ಬುಡಕಟ್ಟು ಹೊರತು ಪಡಿಸಿ) ಎಲ್ಲ ಜನರು ಕೊಪ್ಪಳ ಜಿಲ್ಲೆಯಲ್ಲಿ ಕಾಣಸಿಗುತ್ತಾರೆ. ವರ್ಷದ ಕೊನೆ ಮತ್ತು ಆರಂಭದಲ್ಲಿ ವಿದೇಶಿಯರಿಗಾಗೀಯೇ ಕೆಲ ತಾಣಗಳು ಇಲ್ಲಿವೆ. ಉಡುಗೆ - ತೊಡುಗೆ, ಆಚಾರ ಸಂಪ್ರದಾಯಗಳಲ್ಲಿ ಹೇಳಿಕೊಳ್ಳುವಂಥ ವೈಶಿಷ್ಟ್ಯವೇನಿಲ್ಲ. ಕೊಪ್ಪಳ ಐತಿಹಾಸಿಕವಾಗಿ ಗಳಿಸಿದಷ್ಟೇ ಖ್ಯಾತಿಯನ್ನು ಸಾಹಿತ್ಯ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಉಳಿಸಿಕೊಂಡಿದೆ. ಡೊಳ್ಳುಕುಣಿತ, ಕರಡಿಮಜಲು, ವೀರಗಾಸೆ, ಅಶ್ವನೃತ್ಯ, ಗೀಗೀಪದ, ತತ್ವಪದ, ರಿವಾಯತ್ ... ಹೀಗೆ ಸಾಂಸ್ಕೃತಿಕ ಶ್ರೀಮಂತಿಕೆ ಮೆರೆದಿದೆ.

ಕಳೆದೆರಡು ವರ್ಷಗಳಿಂದ ಅನೇಕ ಕೈಗಾರಿಕೆಗಳು ಕೊಪ್ಪಳಕ್ಕೆ ವಲಸೆ ಬರುತ್ತಿರುವುದರಿಂದ ಕರ್ನಾಟಕದ **"ಜೆವ್‌ಷಡ್‌ಪುರ"** ಎಂದೂ ಕೊಪ್ಪಳವನ್ನು ಕರೆಯಲಾಗುತ್ತಿದೆ. ರಾಷ್ಟ್ರೀಯ ಹೆದ್ದಾರಿ 13 ಹಾಗೂ 63 ಜಿಲ್ಲೆಯಲ್ಲಿ ಹಾದುಹೋಗುತ್ತವೆ. ಇತ್ತೀಚೆಗೆ ರೈಲ್ವೆ ಪ್ರಯಾಣಿಕರ ಸಂಖ್ಯೆಯಲ್ಲಿ ಕಳೆದ ವರ್ಷಕ್ಕೆ ಹೊಲಿಸಿದರೆ ಮೂರುಪಟ್ಟು ಹೆಚ್ಚಾಗಿದೆ. ಜಿಲ್ಲೆಯ ಗಿಣಗೇರಿ ಬಳಿ ಲಘುವಿಮಾನ ನಿಲ್ದಾಣ ಕೇಂದ್ರ ಹಾಗೂ ಖಾಸಗಿ ಎಂಎಸ್‌ಪಿ ಎಲ್ ಪ್ರೈಲಿ. ಯ ವಿಮಾನ ನಿಲ್ದಾಣ ಕೇಂದ್ರಗಳಿವೆ.

ಗಂಗಾವತಿ ಹಾಗೂ ಕುಷ್ಟಗಿ ತಾಲೂಕುಗಳು ವಾಣಿಜ್ಯೋದ್ಯಮದಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತುಸಿಕೊಂಡಿವೆ. ಭತ್ತ ಹಾಗೂ ದಾಳಿಂಬೆ ರಫ್ತಿನಲ್ಲಿ ಮುಂಚೂಣಿಯಲ್ಲಿವೆ. ಕೊಪ್ಪಳ ಹಾಗೂ ಯಲಬುರ್ಗಾ ತಾಲೂಕುಗಳು ಐತಿಹಾಸಿಕ ಶ್ರೀಮಂತಿಕೆ ಹೊಂದಿವೆ. ದೇವಾಲಯಗಳ ಚಕ್ರವರ್ತಿ ಎನಿಸಿಕೊಂಡಿರುವ ಇಟಗಿಯ ಮಹಾದೇವ ದೇವಾಲಯ ಯಲಬುರ್ಗಾ ತಾಲೂಕಿನಲ್ಲಿವೆ.

ಕೊಪ್ಪಳ ತಾಲೂಕಿನಲ್ಲಿ ಅಶೋಕನ ಶಿಲಾಶಾಸನಗಳು, ಪಾಲ್ಕಿಗುಂಡು, ಕೋಟೆಗಳಿದ್ದು, ಭೌಗೋಳಿಕವಾಗಿ ಬಯಲು ಸೀಮೆಯಲ್ಲಿರುವ ಕೊಪ್ಪಳ ಜಿಲ್ಲೆಯ ಉತ್ತರ ಅಕ್ಷಾಂಶ 15-21, ಹಾಗೂ ಪೂರ್ವ ರೇಖಾಂಶದಲ್ಲಿ 76-100ಯಲ್ಲಿ ಹರಡಿಕೊಂಡಿದೆ. ಜಿಲ್ಲೆಯ ಒಟ್ಟು ವಿಸ್ತೀರ್ಣ 5559 ಚ. ಕಿ. ಮೀ.ಗಳು 552.495 ಹೆಕ್ಟೇರು ಅರಣ್ಯ ಪ್ರದೇಶವಿದೆ. 367.027 ಹೆಕ್ಟೇರು ನೀರಾವರಿ ಪ್ರದೇಶವನ್ನು ಈ ಜಿಲ್ಲೆ ಹೊಂದಿದೆ. ಉಳಿದಂತೆ ಬೀಳುಭೂಮಿ, ಗುಡ್ಡಗಾಡು ಪ್ರದೇಶವಿದೆ. ಜಿಲ್ಲೆಯ ಏಕೈಕ ಜೀವನದಿ ತುಂಗಭದ್ರೆಗೆ ಮುನಿರಾಬಾದ್ ಬಳಿ ಅಣೆಕಟ್ಟನ್ನು ಕಟ್ಟಲಾಗಿದ್ದು ಕೊಪ್ಪಳ ಹಾಗೂ ಗಂಗಾವತಿ ತಾಲೂಕಿನಲ್ಲಿ ಭಾಗಶಃ ನೀರಾವರಿಯನ್ನು ಕಲ್ಪಿಸಿದೆ. ಕೊಪ್ಪಳದಿಂದ 12 ಕಿ.ಮೀ.ದೂರದಲ್ಲಿ ಯಲಬುರ್ಗಾ ತಾಲೂಕಿನಲ್ಲಿ ಹಿರೇಹಳ್ಳ ಜಲಾಶಯ ನಿರ್ಮಾಣಗೊಂಡಿದೆ. 32 ಹಳ್ಳಿಗಳಿಗೆ ನೀರುಣಿಸುತ್ತವೆ. ಅಲ್ಲಲ್ಲಿ ಇರುವ ಕೆರೆಗಳೂ ಸಹ ಕೃಷಿ ಮೀನುಗಾರಿಕೆಗೆ ಹಾಗೂ ಅಂತರ್ಜಲ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರವಹಿಸಿವೆ.

**ಎಲ್ಲಿಂದ?... ಹೇಗೆ?... ಜಿಲ್ಲೆಯ ಪ್ರವಾಸ ಇರಲಿ ಹೀಗೆ**

ರೈಲು ಸಂಪರ್ಕ ಕೇವಲ ಕೊಪ್ಪಳ ತಾಲೂಕಿಗೆ ಮಾತ್ರ ಸೀಮಿತವಾಗಿದೆ. ಹಾಗಾಗಿ ರಸ್ತೆ ಮಾರ್ಗವೇ ಪ್ರವಾಸಿಗರಿಗೆ ಒಳಿತು. ನಾಡಿನ ಬಹುತೇಕ ಜಿಲ್ಲೆಗಳ ಬಸ್‌ಗಳು ಇಲ್ಲಿ ಓಡಾಡುತ್ತವೆ. ಮೊದಲು ಕೊಪ್ಪಳಕ್ಕೆ ಬಂದು ಇಲ್ಲಿನ ಐತಿಹಾಸಿಕ ತಾಣಗಳನ್ನು ನೋಡಬಹುದು. ಬಳಿಕ ಗಿಣಗೇರಾ ಕೈಗಾರಿಕೆಗಳು, ಹುಲಗಿ ಮಾರ್ಗವಾಗಿ ಶಿವಪುರದ ಮಾರ್ಕಂಡೇಶ್ವರ, ಹೊಸ ಬಂಡಿ ಹರ್ಲಾಪುರ ಭರೂಕಾ ವಿದ್ಯುತ್ ಕಾರ್ಪೊರೇಷನ್, ಸಾಣಾಪುರ ಮಾರ್ಗವಾಗಿ ಆನೆಗೊಂದಿ, ವಿರೂಪಾಪುರಗಡ್ಡೆ, ಅಂಜನಾದ್ರಿಬೆಟ್ಟ, ಪಂಪಾಸರೋವರ ಮತ್ತಿತರ ತಾಣಗಳ ರಮ್ಯನೋಟ ಸವಿಯಬಹುದು. ನಂತರ ಅಗಳಕೇರಾವರೆಗೆ ಅದೇ ಮಾರ್ಗದಲ್ಲಿ ವಾಪಸ್ ಬಂದು ಹಿಟ್ನಾಳ ಮೂಲಕ ಮುನಿರಾಬಾದ್‌ನ ಪಂಪಾವನ, ಟಿ.ಬಿ. ಡ್ಯಾಂಗಳನ್ನು ನೋಡುಬಹುದು. ಕೊಪ್ಪಳದಿಂದ ಯಲಬುರ್ಗಾ ತಾಲೂಕಿನ ಇಟಗಿ, ಮಂಡಲಗಿರಿ, ಕುಕನೂರು, ಕಲ್ಲೂರು ಯಲಬುರ್ಗಾದ ಐತಿಹಾಸಿಕ ಸ್ಥಳಗಳನ್ನು ನೋಡಬಹುದು. ಅಲ್ಲಿಂದ ಮಂಗಳೂರು ಮೂಲಕ ಕುಷ್ಟಗಿ ತಾಲೂಕು ಪ್ರವಾಸಿ ಹನುಮಸಾಗರದ ಅಭಿನವ ತಿರುಪತಿ ಫೇ ಲಕ್ಷ್ಮೀ ವೆಂಕಟೇಶ್ವರ ದೇವಸ್ಥಾನ, ಕಪಿಲತೀರ್ಥ (ಮಳೆಗಾಲದಲ್ಲಿ ಮಾತ್ರ), ಚಂದಾಲಿಂಗೇಶ್ವರ ದೇವಸ್ಥಾನಗಳಿಗೆ ತೆರಳಬಹುದು. ಗಂಗಾವತಿ ತಾಲೂಕಿನ ಆನೆಗುಂದಿ,

ಕನಕಗಿರಿ, ಹೇಮಗುಡ್ಡದ ಕೋಟೆ ಮತ್ತು ಹಿರೇಬೆಣಕಲ್ ಬಳಿ ಇರುವ ಶಿಲಾಸಮಾಧಿ– (ನಗಾರಿ ಗುಡ್ಡ) ಇವಿಷ್ಟು ಕೊಪ್ಪಳ ಜಿಲ್ಲೆಯ ಪ್ರವಾಸಿತಾಣಗಳು.

ಕೊಪ್ಪಳದ ಕೋಟೆ, ಗವಿಮಠ, ಶಿಲಾಶಾಸನ, ಇಂದ್ರಕೀಲ ಪರ್ವತ ನೋಡಲು ಒಂದು ದಿನ ಬೇಕಾಗುತ್ತದೆ. ಬಳಿಕ ಆನೆಗೊಂದಿ ಹಾಗೂ ಸುತ್ತಲಿನ ತಾಣಗಳನ್ನು ನೋಡಲು ಒಂದು ದಿನ ಬೇಕಾಗುತ್ತದೆ ಬಳಿಕ ಮುನಿರಾಬಾದ್‌ನ ಡ್ಯಾಂ, ಪಂಪಾವನ, ಇಟಗಿ ನೋಡಲು ಒಂದು ದಿನ ಹಾಗೂ ಕುಷ್ಟಗಿ ಜಿಲ್ಲೆಯ ಐತಿಹಾಸಿಕ ಪರಂಪರೆ, ಜಲ್ಲೆಯ ಶ್ರೀಮಂತಿಕೆ, ಬೆಳೆ, ತಿನಿಸು, ಉಡುಗೆ - ತೊಡುಗೆ ... ಎಲ್ಲವನ್ನು ಅರಿತುಕೊಳ್ಳಬಹುದು. ಯಾವುದೇ ಸ್ಥಳಗಳಿಗೂ ಗೈಡ್ ವ್ಯವಸ್ಥೆ ಕೊಪ್ಪಳ ಜಿಲ್ಲೆಯಲ್ಲಿ ಇಲ್ಲ. ಮಾರ್ಗ ಪರಿಚಯವಿದ್ದರೆ ಸಾಕು. ಎಲ್ಲ ತಾಣಗಳ ಸೊಗಸು ಸವಿಯಬಹುದು.

ಗುಡ್ಡಗಳು ಚಿನ್ನದ ಬೆಲೆ ಹೊಂದಿದ್ದು ಗ್ರಾನೈಟ್ ಗಣಿ ಉದ್ಯಮ ಹಾಗೂ ಕಟ್ಟಡಕ್ಕಾಗಿ ಕಲ್ಲಿನ ಉದ್ಯಮಕ್ಕೆ ದಾರಿ ಮಾಡಿಕೊಟ್ಟಿವೆ. ಜಿಲ್ಲೆಯಲ್ಲಿರುವ 744 ಗ್ರಾಮಗಳ ಪೈಕಿ 531 ಗ್ರಾಮಗಳ ಕುಡಿಯುವ ನೀರು ಫ್ಲೋರೈಡ್, ಅಧಿಕ ಲವಣಾಂಶ ಹಾಗೂ ಕಬ್ಬಿಣಾಂಶದಿಂದ ಕೂಡಿದೆ.

ಶೇ. 55. 02 ರಷ್ಟು ಸಾಕ್ಷರತಾ ಪ್ರಮಾಣ ಹೊಂದಿರುವ ಕೊಪ್ಪಳ ಇಂಜಿನಿಯರಿಂಗ್, ವೈದ್ಯಕೀಯ ಶಿಕ್ಷಣ ಸಂಸ್ಥೆಗಳನ್ನು ಕಾಣಬಹುದಾಗಿದೆ. ದೇವಾಲಯಗಳು, ಸ್ಮಾರಕಗಳು, ಗುಹೆಗಳು, ಕೋಟೆಗಳು, ಶಾಸನಗಳು, ಕೆರೆಗಳು, ಉದ್ಯಾನವನಗಳು, ಬಸದಿಗಳು, ಮಠಗಳು ಇತ್ಯಾದಿ ಹೇರಳವಾಗಿ ಸಿಕ್ಕುತ್ತವೆ.

ಕಣ್ಣಿದ್ದವರು ನೋಡಲೇಬೇಕಾದ ಕಲೆಯ ಬೀಡು ಕನಕಗಿರಿ. ಅಂತಾರಾಷ್ಟ್ರೀಯ ಖ್ಯಾತಿ ಪಡೆದ ಕಿನ್ನಾಳಗೊಂಬೆ ಕಲೆ, ವೀರತ್ವ ವೈಭವದ ತಾಣ ಆನೆಗೊಂದಿ, ಪವಿತ್ರ ಪಂಪಾ ಸರೋವರ, ಕಿಷ್ಕಿಂಧೆ, ಕೋಟಿಲಿಂಗಗಳ ತಾಣ ಪುರ, ಜಿಲ್ಲೆಯ ಏಕ ಮೇವ ಜಲಪಾತ - ಕಪಿಲ ತೀರ್ಥ (ಕಪಿಲೆಪ್ಪ), ಬಿಸಿಲು ಬೀಳದ ಬಾವಿ ಹೆಸರಿಲ್ಲದ ಮರ ಖ್ಯಾತಿಯ ಚಂದಾಲಿಂಗ, ಮಿನಿಗೋಲಗುಂಬಜ್, ಮಿನಿ ತಾಜಮಹಲ್, ಕಲ್ಲುಬಾವಿ ಖ್ಯಾತಿಯ ಗಂಗಾವತಿ, ಕುಮಾರರಾಮನ ಕಮ್ಮಟದುರ್ಗ ಮನಸೆಳೆಯುವ ತಾಣಗಳು.

ಕೊಪ್ಪಳ ಜಿಲ್ಲೆಯಲ್ಲಿ ಕೊಪ್ಪಳ, ಗಂಗಾವತಿ, ಕುಷ್ಟಗಿ ಮತ್ತು ಯಲಬುರ್ಗಾ ತಾಲೂಕುಗಳಿವೆ.

**ಇತರೆ ಕೆಲವು ಪ್ರಮುಖ ಸ್ಥಳಗಳು**

ಹುಲಗಿ, ಪಂಪಾವನ, ಸಿಮೆಂಟ್ ಮತ್ತಿತರ ಕೈಗಾರಿಕೆಗಳು, ವಿದ್ಯುತ್ ಉತ್ಪಾದನಾ ಘಟಕಗಳು, ಜಿಲ್ಲಾಡಳಿತ ಭವನ, ಬಹದ್ದೂರಬಂಡಾ ಕೋಟೆ, ಕೊಪ್ಪಳದ ಕೋಟೆ, ಶಿಲಾಯುಗದ ಚಿತ್ರಗಳು, ಜೈನ ಬಸದಿಗಳು, ಇಟಗಿಯ ಮಹಾದೇವ ದೇವಾಲಯಗಳು, ದೋಟಿಹಾಳದ ಶುಕುಮುನೇಶ್ವರ ಹನುಮಸಾಗರದ ಘೇಲಕ್ಷ್ಮೀವೆಂಕಟೇಶ್ವರ (ಅಭಿನವ ತಿರುಪತಿ) ದೇವಸ್ಥಾನ ಮುಂತಾದ ಅನೇಕ ತಾಣಗಳು ಮಕ್ಕಳಿಗೆ ಸಂಪೂರ್ಣ ಜಿಲ್ಲೆಯ ಐತಿಹಾಸಿಕ ಸಾಂಸ್ಕೃತಿಕ ವೈಭವವನ್ನು ಪರಿಚಯ ಮಾಡಿಕೊಡುತ್ತವೆ.

# ಕುಷ್ಟಗಿ ತಾಲೂಕಿನ ಪ್ರೇಕ್ಷಣೀಯ ಸ್ಥಳಗಳು

**ಕಪಿಲತೀರ್ಥ**

**ದೂರ ;**
ತಾಲೂಕಿನಿಂದ : ೩೦ ಕಿ.ಮೀ.
ಜಿಲ್ಲೆಯಿಂದ : ೫೦ ಕಿ.ಮೀ



ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಹನಮಸಾಗರದಿಂದ 8 ಕಿ.ಮೀ. ಕ್ರಮಿಸಿದರೆ ಕಬ್ಬರಗಿ ಎಂಬುದು ಪುಟ್ಟ ಹಳ್ಳಿ. ಅಲ್ಲಿಂದ 2 1/2 ಕಿ.ಮೀ. ದೂರದಲ್ಲಿ ಸಾಗಿದರೆ ಕಪಿಲತೀರ್ಥ ಜಲಪಾತ. ಇದಕ್ಕೆ **ಕಪಿಲಪ್ಪ** ಜಲಪಾತ ಎಂದು ಕರೆಯುವ ದುಂಟು. ಕಪಿಲಮುನೇಶ್ವರನು ಇಲ್ಲಿ ತಪಸ್ಸು ಮಾಡಿ ಗಂಗೆಯನ್ನು ಅವತರಿಸಿ ಈ ಪ್ರದೇಶವನ್ನು ತಪೋಭೂಮಿಯನ್ನಾಗಿಸಿದನೆಂದು ಪ್ರತೀತಿ ಇದೆ. ಕಬ್ಬರಗಿಗೆ ಹೊಂದಿಕೊಂಡುವ ಬೆಣಚುಕಲ್ಲಿನ ಕಡಿದಾದ ಗುಡ್ಡಗಾಡು ನೈಸರ್ಗಿಕ ಸುಂದರ ತಾಣವಿದ್ದು ಈ ಪ್ರದೇಶ ಮಲೆನಾಡ ಸೊಬಗನ್ನು ನೆನಪಿಸುತ್ತದೆ. ಜಲಪಾತದ ಮೇಲೆಯೂ ಕಿರು ಜಲಪಾತಗಳನ್ನು ಸೃಷ್ಟಿಸಿಕೊಂಡು ಬರುವ ನೀರು ಮೂರು ಹಂತವಾಗಿ ಮೂವತ್ತು ಅಡಿ ಎತ್ತರದಿಂದ ಹತ್ತು ಅಡಿ ಅಗಲವಾಗಿ ಧುಮುಕುತ್ತದೆ.

ಕಪಿಲೇಶ್ವರ ಸ್ವಾಮಿ ಮತ್ತು ಚಂದಾಲಿಂಗೇಶ್ವರ ಅಣ್ಣ ತಮ್ಮಂದಿರಿದ್ದು, ಚಂದಾಲಿಂಗೇಶ್ವರನ ವಾಸ ಬೆಟ್ಟದ ಮೇಲಾದರೆ ತಮ್ಮನದು ಕೆಳಬೆಟ್ಟದಲ್ಲಿ ವಾಸ. ತನ್ನ ತಪೋಬಲದಿಂದ ಕಪಿಲೇಶ್ವರ ಗಂಗೆಯನ್ನು ಧರೆಗೆ ಇಳಿಸಿದನು. ಕಾರಣಾಂತರಗಳಿಂದ ಕಪಿಲೇಶ್ವರ ಸ್ವಾಮಿಗೆ ರುಂಡವಿಲ್ಲ ಎಂಬುದು ಇಲ್ಲಿಯ ಜನರ ಅಭಿಮತವಾಗಿದೆ.

ಕಪಿಲೆಪ್ಪ ಜಲಪಾತದಿಂದ ಮೇಲೇಳುವ ಮಂಜಿನ ರಾಶಿಯಿಂದ ಮಲೆನಾಡಿನ ಸೌಂದರ್ಯ ಕಾಣುತ್ತದೆ. ಹಾಸುಬಂಡೆ ಇರುವದರಿಂದ ಇಲ್ಲಿ ಬಿದ್ದನೀರು ಹನಿಯಾಗಿ ಮೇಲಕ್ಕೆ ಚಿಮ್ಮುತ್ತದೆ. ಈ ಜಲಪಾತ ಜುಲೈದಿಂದ ಅಕ್ಟೋಬರ ತಿಂಗಳವರೆಗೆ ಮಳೆಬಂದಾಗ ಸುತ್ತಲಿನ ಜನ ಶ್ರಾವಣ ಮಾಸದಲ್ಲಿ ಈ ಜಲಧಾರೆಗೆ ಪೂಜಿಸುತ್ತಾರೆ. ಇಲ್ಲಿನ ಜನರಿಗೆ ಈ ಜಲ ತಮ್ಮ ಜಮೀನಿನಲ್ಲಿ ಸಿಂಪಡಿಸಿದರೆ ಹೆಚ್ಚಿನ ಬೆಳೆ ಬರುತ್ತದೆಂಬ ನಂಬಿಕೆ ಇದೆ.

**ಅಭಿನವ ತಿರುಪತಿ ಹನುಮಸಾಗರ ಲಕ್ಷ್ಮಿವೆಂಕಟೇಶ್ವರ ದೇವಸ್ಥಾನ**

**ದೂರ ;**
ತಾಲೂಕಿನಿಂದ : ೨೨ ಕಿ.ಮೀ.
ಜಿಲ್ಲೆಯಿಂದ : ೭೨ ಕಿ.ಮೀ





ಹನುಮಸಾಗರದ ಬೆಟ್ಟದ ಮೇಲಿರುವ ಲಕ್ಷ್ಮೀವೆಂಕಟೇಶ್ವರ ದೇವಸ್ಥಾನವು ಐತಿಹಾಸಿಕ ಹಿನ್ನಲೆಯುಳ್ಳ ವಿಶಿಷ್ಟ ದೇವಾಲಯಗಳಲ್ಲಿ ಒಂದಾಗಿದೆ. ತಿರುಮಲ ತಿರುಪತಿಯಲ್ಲಿರುವಂತೆಯೇ ಇಲ್ಲಿಯೂ ಗೋವಿಂದರಾಜ ಪಟ್ಟಣ ಶ್ರೀ ಲಕ್ಷ್ಮೀದೇವಿ, ಪದ್ಮಾವತಿ ದೇವಸ್ಥಾನಗಳು, ಸ್ವಾಮಿ ಪುಷ್ಕರಣಿ, ಕಪಿಲತೀರ್ಥ, ಗಾಳಿಗೋಪುರ, ವರಹಾಸ್ವಾಮಿ ದೇವಸ್ಥಾನಗಳು ಇರುವದರಿಂದ ಇದಕ್ಕೆ ಅಭಿನವ ತಿರುಪತಿಯ ಎಂಬ ಅಭಿದಾನವಿದೆ.

ಸುಮಾರು 400 ವರ್ಷಗಳ ಹಿಂದೆ ಹನುಮಸಾಗರವು ಬಿಜಾಪುರ ಆದಿಲ್ ಷಾಹಿ ಅಧೀನದಲ್ಲಿತ್ತು. ಅಲ್ಲಿಯ ಮಾಂಡಲಿಕ ರಾಜ ಆದಿಷಾಯಿಗೆ ಸರಿಯಾಗಿ ಕಪ್ಪುಕಾಣಿಕೆ, ಗೌರವ ಕೊಡದೇ ಇದ್ದುದರಿಂದ ವೈಮನಸ್ಸು ಉಂಟಾಗಿ ಮಾಂಡಲೀಕ ರಾಜನನ್ನು ನಿವೃತ್ತಿಗೊಳಿಸಿ ದೀವಾನ ಅಧಿಕಾರಿಯಾಗಿದ್ದ ತಿಮ್ಮಪ್ಪಯ್ಯ ದೇಸಾಯಿ ಅವರನ್ನು 35 ಗ್ರಾಮಗಳ ಅಧಿಕಾರಿಯನ್ನಾಗಿ ನೇಮಿಸಲಾಯಿತು. ಅಧಿಕಾರ ಸಿಗದ ಮಾಂಡಲೀಕ ರಾಜ ಸತ್ತ ಮೇಲೆ ಪಿಶಾಚಿಯಾಗಿ ದೇಸಾಯಿಯವನ್ನು ಕಾಡ ತೊಡಗಿದ. ದೇಸಾಯಿಯವರು ತಿರುಪತಿ ತಿಮ್ಮಪ್ಪನ ಮೊರೆಹೋದರು. ಪ್ರತಿ ವರ್ಷ ಪಾದಯಾತ್ರೆ ಮೂಲಕ ತಿರುಪತಿಗೆ ಹೋಗಿ ಶ್ರೀನಿವಾಸ ದರ್ಶನ ಹಾಗೂ ಸೇವೆಯಿಂದ ಪಿಶಾಚಿ ಬಾಧೆಯನ್ನು ಕಳೆದುಕೊಂಡರು. ಮುಂದೆ ವೃದಾಪ್ಯದಿಂದ ಪ್ರತಿವರ್ಷ ತಿರುಪತಿಗೆ ಹೋಗಲು ಆಗದ ಕಾರಣ ಅವರು ಮಾನಸಿಕವಾಗಿ ನೊಂದು ಚಿಂತಾಕ್ರಾಂತರಾಗಿ ವಿಚಾರಮಗ್ನರಾಗಿ ನಿದ್ರೆಯಲ್ಲಿರುವಾಗ ಸ್ವಪ್ನದಲ್ಲಿ ಶ್ರೀ ವೆಂಕಟೇಶನು ಪ್ರತ್ಯಕ್ಷನಾಗಿ ಬೆಟ್ಟದ ಮೇಲೊಂದು ಆಕಳು ಮಲಗಿರುತ್ತದೆ, ಆ ಹಾಸ ಬಂಡೆಯ ಮೇಲೆ ನನ್ನ ಎರಡೂ ಪುಟ್ಟಪಾದಗಳು ಮೂಡಿರುತ್ತವೆ ಅವುಗಳನ್ನು ನಾನೆಂದು ಭಾವಿಸಿ ಪೂಜಿಸಿ ಎಂದು ಹೇಳಿದರು. ಅದರಂತೆ ಬೆಳಿಗ್ಗೆ ಎದ್ದು ಬೆಟ್ಟಕ್ಕೆ ತೆರಳಿ ನೋಡಿದಾಗ ಹಾಸು ಬಂಡೆಯ ಮೇಲೆ ಆಕಳೊಂದು ಮಲಗಿರುತ್ತದೆ. ಅಲ್ಲಿ ಎರಡು ಪಾದಗಳು ಮೂಡಿರುವುದು ಕಂಡುಬರುತ್ತದೆ. ನಂತರ ಪಾದುಕೆ ಪೂಜೆ ಆರಂಭಿಸಿದ ದೇಸಾಯಿಯವರು ಅಷ್ಟಕ್ಕೆ ತೃಪ್ತರಾಗದೆ ಸ್ವಾಮಿ ದರ್ಶನವಾಗಲಿಲ್ಲವೆಂದು ಚಿಂತಾಮಗ್ನರಾದಾಗ ಮತ್ತೇ ಶ್ರೀನಿವಾಸನು ಸ್ವಪ್ನದಲ್ಲಿ ಕಾಣಿಸಿಕೊಂಡು ಕುಷ್ಟಗಿ ಭಾವಿಯೊಂದರಲ್ಲಿ ಬೋರಲಾಗಿ ಬಿದ್ದಿರುವ ಉದ್ಭವ ಮೂರ್ತಿ ತೆಗೆದುಕೊಂಡು ಅದನ್ನು ಹನುಮಸಾಗರದವರೆಗೆ ಸಕಲ ವಾದ್ಯ ವೈಭವಗಳೊಂದಿಗೆ ತರುವ ಮೂಲಕ ಬೆಟ್ಟದ ಮೇಲೆ ಪಾದುಕೆಗಳ ಮುಂದೆ ಪ್ರತಿಷ್ಠಾಪನೆ ಮಾಡಲಾಯಿತು ಎಂಬ ಪ್ರತೀತಿ ಇದೆ.

**ಭೂ-ಕೈಲಾಸ ಕೋಟಿ ಲಿಂಗಗಳ ಅದ್ಭುತ ತಾಣ – ಪುರ**

**ದೂರ ;**

ತಾಲೂಕಿನಿಂದ : ೩೦ ಕಿ.ಮೀ.

ಜಿಲ್ಲೆಯಿಂದ : ೮೦ ಕಿ.ಮೀ



ಕಲಚೂರಿಗಳ ಆಳ್ವಿಕೆಯಲ್ಲಿ ಈ ದೇವಾಲಯ ನಿರ್ಮಾಣ ಗೊಂಡಿದ್ದು ಭಾಗಶಃ ನಾಶವಾಗಿದೆ ಸೋಮೇಶ್ವರ ದೇವಾಲಯವಾದ ಇದು **ಕೋಟಿಲಿಂಗಗಳ ಪುರ**ವೆಂದು ಪ್ರಸಿದ್ಧಿಯನ್ನು ಪಡೆದಿದೆ ಎಂದರೆ ಹುಬ್ಬೇರಿಸುವರುಂಟು. ಈ ಗುಡಿ ಪ್ರವೇಶಿಸಿದ ನಂತರ ಸತ್ಯವಾಗುವದು ೧೫ ನೇಯ ಶತಮಾನದಲ್ಲಿ ವೀರ ಪ್ರತಾಪದೇವ ರಾಯನಿಗೆ ಧರ್ಮವಾಗಬೇಕೆಂದು ಆತನ ರಾಣಿವಾಸದ ವ್ಯಕ್ತಿಯೋರ್ವನು ಸೋಮೇಶ್ವರ ದೇವರಿಗೆ ದತ್ತಿ ಬಿಡುವನು ಅಲ್ಲಿಯ ಮತ್ತೊಂದು ಶಾಸನವು (ಕ್ರಿ,ಶ ೧೫೪೭)ಇದೇ ರೀತಿ ಸಾಮಂತನು ವೀರ ಪ್ರತಾಪದೇವರಾಯನಿಗೆ ಆಯುಷ್ಯವೃದ್ಧಿಗಾಗಿ ಸೋಮೇಶ್ವರ ದೇವರಿಗೆ ದತ್ತಿ ಬಿಡುವನು ಎಂದು ಉಲ್ಲೇಖವಿದೆ **ಓಹಿಲ**ನೆಂಬ ಶಿಲ್ಪಿಯು ಕೋಟಿಲಿಂಗಗಳನ್ನು ಮಾಡಿ ಪ್ರತಿಷ್ಠಾನ ಮಾಡಿದನೆಂದು ಹೇಳಿದೆ.

ನಂತರ ಈ ದೇವಾಲಯಕ್ಕೆ ಸುತ್ತಲೂ ಸೇರ್ಪಡೆಗೊಂಡವೆಂದು ಹೇಳಲಾಗಿದೆ. ಇಲ್ಲಿನ ಕೇಶವ, ನಾಲ್ಕು ಮುಖದ ನಂದಿ. ಮಹಿಷಾಸುರ, ಉಗ್ರನರಸಿಂಹ ಶಿವ, ಚಂದ್ರ, ಸೂರ್ಯ, ಪಾರ್ವತಿ, ಲಕ್ಷೀ, ಕೃಷ್ಣ ಷಣ್ಮುಖ ಉಮಾ ಮಹೇಶ್ವರ, ಗಣೇಶ, ಇತರ ಚಿಕ್ಕ ಚಿಕ್ಕ ಸುಂದರ ಶಿಲ್ಪಗಳಿವೆ ಬೇಡರ ಕಣ್ಣಪ್ಪನಕಲ್ಲು ಸಂತನ ಕಲ್ಲು ಶ್ರವಣಕುಮಾರ ನಾಗಪುರುಷ, ಗೋಪಾಲಕರು. ಯಕ್ಷರ ಶಿಲ್ಪಗಳು. ಇಲ್ಲಿವೆ ಸಣ್ಣ ಮಂಟಪದಲ್ಲಿ ಸುತ್ತಲೂ ಅನೇಕ ಸಾಲು ಲಿಂಗಗಳಿವೆ ಇವು ನೋಡುಗರಿಗೆ ಆಶ್ಚರ್ಯವನ್ನುಂಟುಮಾಡುತ್ತವೆ ಕೆಲವು ಏಕಲಿಂಗವಾದರೆ ಕೆಲವು ಹತ್ತಾರು ನೂರಾರು ಲಿಂಗಗಳ ಒಳಗೊಂಡ ಏಕಪೀಠವಾಗಿವೆ. ಮುಸ್ಲಿಂ ಆಡಳಿತಕ್ಕೆ ಒಳಗಾದ ಮೇಲೆ ಇಸ್ಲಾಂ ಶೈಲಿಯಲ್ಲಿ ಮಹಾದ್ವಾರ ಮತ್ತು ಗೋಡೆಯ ಮೇಲ್ಭಾಗದಲ್ಲಿ ಚಿಕ್ಕ ಗೋರಿಯಾಕಾರದ ಭಾಗಗಳನ್ನು ಕೆತ್ತಲಾಗಿದೆ.

ಇಲ್ಲಿರುವ ಸರ್ಪಸಾಲುಗಳು ಮೂರುಕಾಲಿನ ಸರ್ಪ ಶಿಲಾಮಂಚ, ಚತುರ್ಮುಖ ನಂದಿವಿಗ್ರಹ, ಶಿವಲಿಂಗಗಳನ್ನು ಹೊತ್ತ ಆನೆ, ಶಿಲಾವೃಂದಾವನ, ಕೈಲಾಸನಾಥ ರಥಗಳು ಶಿಲ್ಪಕಲಾ ಕುಸುರಿಗೆ ಸಾಕ್ಷಿಯಾಗಿವೆ ಮತ್ತು ಇಲ್ಲಿನ ಪುರಾಣ ದಂತಕಥೆಗಳ ಉಬ್ಬು ಶಿಲ್ಪಗಳು ದೃಶ್ಯಪುರಾಣ ಕಾಲಕ್ಕೆ ಕರೆದೊಯ್ಯುತ್ತವೆ.

ಸೋಮನಾಥ ದೇವಾಲಯದ ಹಿಂದೆ ಬನಶಂಕರಿ ದೇವಾಲಯವಿದೆ. ಹೊರಭಾಗದಲ್ಲಿ ಈಶ್ವರ ದೇವಾಲಯವಿದೆ. ಆದರ ಪಕ್ಕದಲ್ಲಿ ಕೈಕೊಳದ ಕಂಭವಿದೆ.

ಇಲ್ಲಿಂದ ಕೆಲವು ಗಜಗಳ ಅಂತರದಲ್ಲಿ ಮರದ ಕೆಳಗೆ ಒಂದು ಲಿಂಗವಿದೆ. ಇದಕ್ಕೆ **ಮುನಿಸು ಲಿಂಗವೆಂದು** ದೇವಾಲಯದ ಗರ್ಭಗುಡಿಯ ಮುಂದೆ ಕಲ್ಲಿನ ಹರಿವಾಣವಿದೆ. ಎಲ್ಲಾ ಲಿಂಗಗಳ ಸ್ನಾನ ಪೂಜೆಯ ಅನಂತರ ನೈವೇದ್ಯ ಮಾಡುವಾಗ ಈ ಹರಿವಾಣದಲ್ಲಿ ಹಾಕಿ ಒಂದು ಸುತ್ತು ತಿರುಗಿದರೆ ಅಲ್ಲಿರುವ ಎಲ್ಲಾ ಲಿಂಗಗಳಿಗೆ ಏಕಕಾಲಕ್ಕೆ ನೈವೇದ್ಯ ಅರ್ಪಿಸಿದಂತೆ. ಕಣ್ಣಿದ್ದವರು ಕನಕಗಿರಿ ನೋಡಬೇಕು, ಕಾಲಿದ್ದವರು ಹಂಪೆ ನೋಡಬೇಕು ಎಂಬ ಇಲ್ಲಿಯ ಜನವಾಣಿಗೆ ಕಣ್ಣು-ಕಾಲು ಎರಡು ಇದ್ದವರು ಪುರ ನೋಡಬೇಕು ಎಂಬ ವಾಣಿ ಇದೆ.

**ಚಂದಾಲಿಂಗೇಶ್ವರ – ಹನುಮಸಾಗರ**

**ದೂರ ;**

ತಾಲೂಕಿನಿಂದ : ೩೦ ಕಿ.ಮೀ.

ಜಿಲ್ಲೆಯಿಂದ : ೮೦ ಕಿ.ಮೀ



ತಿರುಳ್ಗನ್ನಡ ನಾಡಿನ ಅಭಿನವ ತಿರುಪತಿ ಎಂದು ಹೆಸರುವಾಸಿ ಯಾಗಿರುವ ಹನುಮಸಾಗರದ ಚಂದಾಲಿಂಗೇಶ್ವರ ಬೆಟ್ಟದ ಮೇಲಿನ ನೈಜ ಸೌಂದರ್ಯವು ಪ್ರವಾಸಿ ತಾಣವನ್ನಾಗಿ ಸೃಷ್ಟಿಸಿದೆ.

ಬಸವೇಶ್ವರರ ಸಮಕಾಲೀನರೆಂದು ಊಹಿಸಲಾಗಿರುವ ಚಂದಾಲಿಂಗ (ಶರಣ)ರು ತಮ್ಮ ಧರ್ಮಪತ್ನಿಯೊಂದಿಗೆ ಇಲ್ಲಿ ನೆಲೆಸಿದ್ದು , ಬಿಜಾಪೂರ ಸುಲ್ತಾನನ ಕಾಲದಲ್ಲಿ 'ಚಂದ್ರಗಿರಿ' ಮಹಾಮಂಡಲವಾಗಿತ್ತೆಂದು ಆವರಣದಲ್ಲಿನ ಶಿಲಾಶಾಸನದ ಪ್ರಕಾರ ಕ್ರಿ.ಶ. 1267ರ ಪ್ರಾರ್ಥಿವ ಸಂವತ್ಸರದ ಹುಣ್ಣಿಮೆ ದಿನದಂದು ಬಂಡಾರಿ ಹೆಗ್ಗಡಿ ಮಾರಮಯ್ಯರು ಇದನ್ನು ಗೆದ್ದುಕೊಟ್ಟ ಇತಿಹಾಸವಿದೆ. ಕಲ್ಯಾಣಿ ಚಾಲುಕ್ಯರ ಆರನೇ ವಿಕ್ರಮಾದಿತ್ಯನು ಈ ಭಾಗದಲ್ಲಿ ಮೂರು ತಿಂಗಳ ಅವಧಿಯ ವಿಹಾರಕ್ಕೆಂದು ಈ ದೇಗುಲ ಸಮುಚ್ಚಯದಲ್ಲಿ ಬರುತ್ತಿದ್ದನೆಂದು ಅದಕ್ಕಾಗಿ ಕೋಟೆಯನ್ನು ನಿರ್ಮಿಸಿರಬೇಕೆಂದು ಊಹಿಸಲಾಗಿದೆ. 56 ಕಂಬಗಳು ಕೆತ್ತನೆ ಒಳಗೊಂಡಿರುವ ಇದು ಅರುವಿನ ಮಂಟಪವಾಗಿದ್ದು - ದೇಗುಲ ಸುತ್ತಲೂ 100 ದೇವರ ಮೂರ್ತಿಗಳು ಇವೆ.

ಬಸವಣ್ಣ, ವಿಶ್ವೇಶ್ವರಲಿಂಗ, ಶ್ರೀಶೈಲ ಮಲ್ಲಿಕಾರ್ಜುನ, ಉಜ್ಜಯನಿ ಶಿದ್ದೇಶ್ವರ, ಶ್ಯಾಮನಾಥಲಿಂಗ, ವಿರುಪಾಕ್ಷ ಲಿಂಗಗಳಿದ್ದು, ಇಲ್ಲಿನ 'ಬಿಸಿಲು ಬೀಳದ ಭಾವಿ'ಯ ನೀರು ಸಿಹಿಯಾಗಿದ್ದು 'ಹಾಲುಭಾವಿ' ಎಂದು ಕರೆಯಲಾಗುತ್ತದೆ. ವೀರಗಲ್ಲುಗಳು ಎರಡು ಶಿಲಾಶಾಸನಗಳು ಇವೆ. ಆಲದ ಬೃಹತ್ ಮರವಿದೆ. ಇದೊಂದು ಪ್ರವಾಸಿ ತಾಣವಾಗಲು ಅರ್ಹತೆ ಹೊಂದಿದೆ.

ಕೋಟೆಯ ಆಗ್ನೇಯ ಭಾಗದಲ್ಲಿ ಒಂದು ವಿಚಿತ್ರ ಮರವಿದೆ. ಇದಕ್ಕೆ ಯಾವ ಮರವೆಂದು ಕರೆಯಬೇಕು ಎನ್ನುವುದೇ ತಿಳಿಯುವುದಿಲ್ಲ. ಈ ಕೋಟೆಯ ಉತ್ತರ ಭಾಗದಲ್ಲಿ ಎರಡು ದೇಗುಲಗಳಿವೆ. ವೀರಭದ್ರ ಹಾಗೂ ಯಲ್ಲಾಲಿಂಗ ದೇಗುಲಗಳು. ಯಲ್ಲಾಲಿಂಗ ದೇಗುಲಗಳ ಪಕ್ಕದಲ್ಲಿ ಒಂದು ಸಣ್ಣ ಕೊಳ ಇದೆ. ಇದಕ್ಕೆ ಹೂವಿನ ಕೊಳ ಎನ್ನುತ್ತಾರೆ. ತನ್ನ ಇತಿಹಾಸ ಸಾರದೇ ಕಲ್ಲಲ್ಲಿ ಕಲ್ಲಾಗಿ ಚಲ್ಲಾಪಿಲ್ಲಿಯಾಗಿ ಹರಡಿರುವ ಈ ಕೋಟೆಯ ಸುತ್ತಮುತ್ತಲಿನ ಪ್ರದೇಶಗಳು ಮತ್ತು ಇಲ್ಲಿನ ಇತಿಹಾಸವನ್ನು ಹೆಚ್ಚಿನ ಅಧ್ಯಯನಕ್ಕೆ ಒಳಪಡಿಸುವ ಅವಶ್ಯಕತೆ ಇದೆ.

**ದೋಟಿಹಾಳ ಶ್ರೀ ಅವಧೂತ ಶುಕಮುನಿ ತಾತನವರ ಮಠ :**



ದೋಟಿಹಾಳದ ದಕ್ಷಿಣ ಭಾಗದಲ್ಲಿ ದೊಡ್ಡ ಪ್ರಮಾಣದ ಡಬ್ಬಗಳ್ಳಿ ಬೆಳೆದಿತ್ತು. ಅಲ್ಲೊಂದು ಪುರಾತನ ಬಯಲು ಬಸವೇಶ್ವರ ದೇಗುಲವಿದೆ. ಅದರ ಮುಂದೆ ಇದ್ದ ಕಲ್ಲು ಗುಂಡಿನ ಮುಂದೆ ಯೋಗನಿದ್ರೆಯಲ್ಲಿದ್ದ ತಾತನವರು ಕಂಡದ್ದು ಒಂದು ಆಶ್ಚರ್ಯದ ಘಟನೆಯಾಗಿದೆ. ಆಗ ಊರಿನ ರಾಜೇಗೌಡ ಪೋಲೀಸ ಗೌಡನಾಗಿದ್ದನು. ಊರಲ್ಲಿ ಕಳವಾಗಿದ್ದರಿಂದ ಕಳ್ಳನ ಪತ್ತೆಗಾಗಿ ಹುಟುಕಾಟ ನಡೆದಿತ್ತು. ಇಂತಹ ಸಂದರ್ಭದಲ್ಲಿ ಒಂದು ಕುರಿಮರಿ ಮೇಯುತ್ತಿತ್ತು. ಶುಕಮುನಿ ಇರುವ ಜಾಗೆಯ ಹತ್ತಿರ ಹೋಯಿತು. ಡಬ್ಬಗಳ್ಳಿ ಬಯಲು ಮಾಡುತ್ತಾ ಜನ ಹೋದರು. ಅಲ್ಲಿ ತಾತನವರು ಡಬ್ಬಗಳ್ಳಿ ಮಧ್ಯದಲ್ಲಿ ಯೋಗ ಸ್ಥಿತಿಯಲ್ಲಿ ಕಂಡರು. ಅವರು ಸ್ಥಿತಿಯನ್ನು ಅರಿಯದ ಜನರು ರಾಜೇಗೌಡನಿಗೆ ಸುದ್ದಿ ಮುಟ್ಟಿಸಿದರು. ಅವನು ತಾತವನರನ್ನೇ ಕಳ್ಳನೆಂದು ಭ್ರಮಿಸಿ ಊರ ಚಾವಡಿಯಲ್ಲಿ ಕಟ್ಟಿ ಬಡಿಸಿದರು. ಆದರೆ ಏಟು ತಿಂದರೂ ಬಾಹ್ಯವಾಗಿ ದುಃಖಿಸಲಿಲ್ಲ. ನೋವಿನ ಒಂದಂಶ ಕೂಡಾ ತೋರಲಿಲ್ಲ ! ಇದರಿಂದ ಜನರಿಗೆ ಆಶ್ಚರ್ಯವಾಯಿತು. ಇದನ್ನು ಅರಿತ ಶ್ರೀ ಸಿದ್ಧಲಿಂಗ ಯತಿಗಳು 'ಇವರು ಸಾಮಾನ್ಯ ವ್ಯಕ್ತಿಗಳಲ್ಲ. ಪರಾಶರ ಋಷಿಗಳ ಮಗ ಒಬ್ಬ ಶುಕಮುನಿ ಇದ್ದ, ಅವನು ದಿಗಂಬರನಾಗಿದ್ದು ದೇಹದ ಅಭಿಮಾನ ತೊರೆದು ಬಾಹ್ಯ, ಪ್ರಜ್ಞೆ ಕಳೆದು ಸದಾ ಆತ್ಮನಲ್ಲಿ ಸಂತೋಷವಾಗಿರುತ್ತಿದ್ದನು. ಜನಕ ಮಹಾರಾಜನ ಉಪದೇಶ ಪಡೆಯಲು ಹೋಗಿ ಅನೇಕ ಪರೀಕ್ಷೆಗೆ ಒಳಗಾದನು. ಆತನು ತನ್ನತನ ಬಿಟ್ಟುಕೊಡಲಿಲ್ಲ. ಅಂತಹ ಲೀಲಾಪುರುಷ ತಾತನವರು. ಆದುದರಿಂದ ಅವರ ಪುನರಾವತಾರವೇ ಶ್ರೀ ಅವಧೂತ ಶುಕಮುನಿ ತಾತನವರು' ಎಂದೂ, "ಶುಕಮುನಿ" ಎಂದು ನಾಮಕರಣ ಮಾಡಿದ ನಂತರವೇ ಇವರ ಹೆಸರು ಜನರಿಗೆ ಜನಜನಿತವಾಯಿತು. ಇವರ ಪವಾಡಗಳಿಂದಾಗಿ ಈ ಭಾಗದ ಜನರಲ್ಲಿ ಅತ್ಯಂತ ದೈವೀ ಸಂಕೇತವಾಗಿ ನಿಂತಿದ್ದಾರೆ. ದಿನಾಂಕ : 20-11-1938ನೇ ಇಸ್ವಿಯಲ್ಲಿ ಭಾದ್ರಪದ ಶುಕ್ರವಾರ ಬೆಳಗ್ಗೆ 8 ಘಂಟೆಗೆ ರುದ್ರಮುನಿ ಸ್ವಾಮಿಗಳ ಮಠದ ಹತ್ತಿರ ಇಹಲೋಕ ತ್ಯಜಿಸಿದರೂ ಇಂದಿಗೂ ಜನರ ಮನಸ್ಸಿನಲ್ಲಿ ಅಮರರಾಗಿದ್ದಾರೆ. ಪ್ರತಿವರ್ಷ ಶಿವರಾತ್ರಿ ಅಮವಾಸ್ಯೆಯಂದು ದೋಟಿಹಾಳದಲ್ಲಿ ದೊಡ್ಡ ರಥೋತ್ಸವವು ಜರುಗುತ್ತದೆ. ಈ ಭಾಗದ ಜನರಿಗೆ ಇದೊಂದು ಧಾರ್ಮಿಕ ಪುಣ್ಯಕ್ಷೇತ್ರವಾಗಿದೆ.

**ಕುಷ್ಟಗಿ ತಾಲೂಕಿನ ಇತರೆ ಪ್ರವಾಸಿ ತಾಣಗಳು**

ಕುಷ್ಟಗಿ ಅಡವಿರಾಯನ ದೇವಸ್ಥಾನ, ಹನುಮಸಾಗರ ಪವನ ವಿದ್ಯುತ್ ಕೇಂದ್ರ, ಮಾಟೂರಿನ ಈಶ್ವರ ದೇವಾಲಯ, ಮೇಗೂರಿನ ಈಶ್ವರ ದೇವಾಲಯ, ಮೇಣದಾಳ ವಿಷ್ಣು ದೇವಾಲಯ, ಮುದೇನೂರು ಪಾರ್ಶ್ವನಾಥ ದೇವಾಲಯ, ಶಕ್ತಿ ದೇವತೆ ಮೂರ್ತಿ, ಗೋತಗಿಯ ರಾಮಲಿಂಗೇಶ್ವರ ದೇವಾಲಯ, ಹನಮಸಾಗರದ ಅಂಬಾಭವಾನಿ, ಪುರದ ಕೆರೆ, ಅಂಟರಠಾಣಾದ ಜಂಬುನಾಥೇಶ್ವರ.

ತಾವರಗೇರಾದಿಂದ 4 ಕಿ.ಮೀ. ಅಂತರದಲ್ಲಿರುವ ಗಾಣಗಿತ್ತಿ ಗುಡ್ಡದ ಗುಹಾ ಚಿತ್ರಗಳು, ಮತ್ತು ಹಿರೇಮನ್ನಾಪುರದ ಬಳಿ ಇರುವ ಗುಡದೂರ ದೊಡ್ಡ ಬಸವೇಶ್ವರ ದೇವಸ್ಥಾನ ಮತ್ತು ಮುಂತಾದವುಗಳು.

# ಯಲಬುರ್ಗಾ ತಾಲೂಕಿನ ಪ್ರೇಕ್ಷಣೀಯ ಸ್ಥಳಗಳು

ಯಲಬುರ್ಗಾ ತಾಲೂಕು-ವ್ಯಾಪ್ತಿಯಲ್ಲಿ ಚಿಕ್ಕದಿದ್ದರೂ ಐತಿಹಾಸಿಕವಾಗಿ ಬೃಹತ್ತಾಗಿ ಗುರುತಿಸಿಕೊಂಡಿದೆ. ಯಲಬುರ್ಗಾ ಪಟ್ಟಣ, ಕಲ್ಲೂರು, ಮುಧೋಳ, ವಜ್ರಬಂಡಿ, ಲಿಂಗನಬಂಡಿ, ಶಿರೂರು,ಇಟಗಿ, ಹಿರೇಮ್ಯಾಗೇರಿ ಈ ಗ್ರಾಮಗಳು ಸಾಂಸ್ಕೃತಿಕ, ಧಾರ್ಮಿಕ, ಐತಿಹಾಸಿಕ ತಾಣಗಳಾಗಿವೆ.

**ಶ್ರೀ ಮಹದೇವ ದೇವಾಲಯ ಇಟಗಿ**

**ದೂರ :**
ತಾಲೂಕಿನಿಂದ : ೩೦ ಕಿ.ಮೀ.
ಜಿಲ್ಲೆಯಿಂದ : ೨೦ ಕಿ.ಮೀ.



ಕಲ್ಯಾಣಿ ಚಾಲುಕ್ಯರ ಕಾಲದ ವಾಸ್ತು ಶಿಲ್ಪಕ್ಕೆ ಕಲಾ ಕುಸರಿಯ ಶ್ರೇಷ್ಟತೆಗೆ ಇದು ಸಾಕ್ಷಿಯಾಗಿದೆ. ಶಾಸನದಲ್ಲಿ ಇದನ್ನು **ದೇವಾಲಯಗಳ ಚಕ್ರವರ್ತಿ** ಎಂದು ಕರೆಯಲಾಗುತ್ತದೆ.

ಕರ್ನಾಟಕದಲ್ಲಿ ಹಳೇಬೀಡಿನ ದೇವಾಲಯ ಬಿಟ್ಟರೆ ಅತ್ಯಂತ ಸುಂದರವಾದ ದೇವಾಲಯ ಇದಾಗಿದೆ. ಇಟಗಿ ಮೂಲತ:ಅಗ್ರಹಾರ. ೬ನೇಯ ವಿಕ್ರಮಾದಿತ್ಯನ ದಂಡನಾಯಕ ನಂದಿವಿಗ್ರಹಿ ಮಹಾದೇವನು ತನ್ನ ಹೆಸರಿನಿಂದ ಕ್ರಿ,ಶ,೧೧೧೨ ರಲ್ಲಿ ಇದನ್ನು ನಿರ್ಮಿಸಿದನು. ಪೂರ್ವಾಭಿಮುಖವಾಗಿರುವ ಈ ದೇವಾಲಯವು ಮಹಾಮಂಟಪ, ನವರಂಗ, ಗರ್ಭಗುಡಿ, ಸುಖನಾಸಿ ಹೊಂದಿದ್ದು ೬೮ ಕಂಬಗಳ ಮೇಲೆ ರಚನೆಗೊಂಡಿದೆ. ೨೩ ದೊಡ್ಡ ಕಂಬಗಳು ನೆಲದ ಮೇಲಿಂದ ಚಾವಣಿಗೆ ಪ್ರಮುಖ ಆಧಾರ ಒದಗಿಸಿವೆ. ಇಲ್ಲಿನ ವೈಶಿಷ್ಟವೆಂದರೆ ಕಂಬಗಳಲ್ಲಿ ಅರಳಿರುವ ಕಲಾ ವೈಶಿಷ್ಟತೆ ಚೌಕಾಕಾರದ ದುಂಡಗಿನ ನುಣುಪಾದ ಹಸಿರು ಕಲ್ಲಿನಿಂದಾಗಿ ಕನ್ನಡಿಯಂತೆ ಹೊಳೆಯುತ್ತದೆ. ಮಹಾಮಂಟಪದಲ್ಲಿ ಅಷ್ಟಕೋನಾಕೃತಿಯಲ್ಲಿ ಭುವನೇಶ್ವರಿ ಮೂರ್ತಿ ಇದೆ. ಚಾಮುಂಡಿ, ನಟರಾಜ, ನರಸಿಂಹ, ಗಣೇಶ ಶಿಲ್ಪಗಳನ್ನು ಕಂಬಗಳಲ್ಲಿ ಕೆತ್ತಲಾಗಿದೆ ಗರ್ಭಗುಡಿ ೧೨೦ ಅಡಿ, ೬೦ ಅಡಿ ಅಗಲವಿದ್ದು, ಇಲ್ಲಿ ಲಿಂಗವಿದ್ದು ಎದರು ಬೀದಿಯಲ್ಲಿ ನಂದಿ ವಿಗ್ರಹವಿದೆ. ಮುಂಭಾಗದಲ್ಲಿ ಪುಷ್ಕರಣಿ ಇದೆ. ಕಲ್ಯಾಣಿಚಾಲಕ್ಯ ಕಾಲದಲ್ಲಿ ಕಲ್ಲೂರು, ಕವಿತಾಳ, ಬಳಗಾನೂರು, ಮಕ್ಕುಂದಿ, ರೌಡಕುಂದಿ ದೇವರಗುಡಿಗಳಲ್ಲಿ ಇರುವ ವಾಸ್ತುಶಿಲ್ಪ ಮಾದರಿಗಳಿವೆ.

ಮಹಾದೇವ ದೇವಾಲಯ 40 ಅಡಿ ಎತ್ತರವಿದೆ. ಮೆಟ್ಟಲುಗಳ ಮೇಲೇರಿ ಸ್ತುಪದಲ್ಲಿ ಒಂದಾಗುತ್ತವೆ.ಶಿಖರದಲ್ಲಿ 3 ಅಂತಸ್ತುಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಗೋಪುರ ಸುತ್ತಲೂ ಚಿಕ್ಕ ಚಿಕ್ಕ ವಿಗ್ರಹಗಳಿದ್ದು ಹೆಚ್ಚಿನವು ಭಗ್ನಗೊಂಡಿವೆ. ಸೂತ್ತಲೂ 11 ಗುಡಿಗಳಿದ್ದು ಉತ್ತಮ ಸ್ಥಿತಿಯಲ್ಲಿಲ್ಲ. ಮುಂಭಾಗದಲ್ಲಿ ದೊಡ್ಡ ಪುಷ್ಕರಣಿ ಇದೆ. ದಂಡೆಗುಂಟ ಮಂಟಪಗಳು ನಾಶಗೊಂಡಿವೆ.

**ಕುಕನೂರಿನ ಮಹಾಮಾಯೆ ದೇವಾಲಯ**

**ದೂರ ;**

ತಾಲೂಕಿನಿಂದ : ೨೫ ಕಿ.ಮೀ.

ಜಿಲ್ಲೆಯಿಂದ : ೨೦ ಕಿ.ಮೀ



ಬಾದಾಮಿಯ ಚಾಲುಕ್ಯರ ಕಾಲದಲ್ಲಿ ಈ ನಗರ ಸಹಸ್ರ ಮಹಾಜನಗಳ ಬೀಡಾಗಿತ್ತು ಇದನ್ನು **ಮಹಾ ಅಗ್ರಹಾರ** ಎಂದು ಉಲ್ಲೇಖಿಸಲಾಗಿದೆ. ಕ್ರಿ.ಶ.೧೧೧೨ರಲ್ಲಿ ಚಾಲುಕ್ಯರ ಚಕ್ರವರ್ತಿಯಾದ ೬ನೇ ವಿಕ್ರಮಾರ್ಜುನನ ದಂಡನಾಯಕ ಮಹಾದೇವ ಇದನ್ನು ಕಟ್ಟಿಸಿದನು ಎಂದು ಇತಿಹಾಸಕಾರರ ಅಭಿಪ್ರಾಯವಾಗಿದೆ. ಯಲಬುರ್ಗಾ ತಾಲೂಕಿನ ಪ್ರಮುಖ ವಾಣಿಜ್ಯ ಹಾಗೂ ಐತಿಹಾಸಿಕ ಸ್ಥಳ. ಇತಿಹಾಸದಲ್ಲಿ ಇದನ್ನು **ಕುಕ್ಕನೂರು** ಮತ್ತು **ಕುಂತಳಪುರ**ವೆಂದು ಕರೆಯಲಾಗುತ್ತಿದ್ದು, 30 ಹಳ್ಳಿಗಳನ್ನೊಳಗೊಂಡ ಆಡಳಿತ ವಲಯ ಇದಾಗಿತ್ತು. ಇಲ್ಲಿ ಕಲ್ಲೇಶ್ವರ, ಚಳ್ಳೇಶ್ವರ, ಬಿಂದು ಮಾಧವ ಮಲ್ಲಿಕಾರ್ಜುನ ಮತ್ತು ಮಹಾಮಾಯೆ ದೇವಸ್ಥಾನಗಳು ಅತ್ಯಂತ ಪ್ರಸಿದ್ಧಿಯನ್ನು ಪಡೆದಿವೆ. ಕುಕನೂರಿನ ಮಹಾಮಾಯೆ ದೇವಾಲಯವು ಪ್ರಾಚೀನ ಕಾಲದಿಂದ ಆದಿಶಕ್ತಿಯ ಆರಾಧನೆಯ ಪ್ರತೀಕವಾಗಿ ನಿರ್ಮಾಣಗೊಂಡಿದೆ. ದಸರಾ ಹಬ್ಬದಲ್ಲಿ ಕುಮ್ಮಟದುರ್ಗದ ಮುಕುಂಪ, ಹುಲಗಿ ಹಾಗೂ ಕುಕನೂರಿನ ಮಹಾಮಾಯ ದೇವಾಲಯದಲ್ಲಿ ವಿಶೇಷ ಪೂಜೆ ದಸರಾ ಆಚರಣೆ ಆರಂಭಗೊಂಡಿದ್ದೇ ಈ ಮೂರು ಸ್ಥಳದಲ್ಲಿ ಎಂಬುದು ಇತಿಹಾಸಕಾರರ ಅಂಬೋಣ ಈ ಗ್ರಾಮವು ಪ್ರಾಚೀನ ಕಾಲದಲ್ಲಿ ಅಗ್ರಹಾರವಾಗಿತ್ತಾದರೂ ಪ್ರಖ್ಯಾತ ವಿದ್ಯಾ ಕೇಂದ್ರವೆಂತಲೂ ಇದು ಗುರುತಿಸಿ ಕೊಂಡಿದೆ.

ದಕ್ಷಿಣಾಭಿಮುಖವಾಗಿರುವ ಇದು ಶಾಸನದಲ್ಲಿ **ಜೇಷ್ಟತಾ ದೇವಿ** ಎಂದು ಕರೆಸಿ ಕೊಂಡಿರುವ ಈ ದೇವತೆ **ಶಕ್ತಿ ದೇವತೆ** ಮತ್ತು **ಶಕ್ತಿಪೀಠದ ಸ್ಥಾನಾಧಿಪತಿ** ಎಂದು ಕರೆಯಲಾಗುತ್ತಿತ್ತು.

ಕುಂತಳಪುರ (ಚಂದ್ರಹಾಸನ ರಾಜಧಾನಿ) ರಾಕೂಟರ ಕಾಲದಲ್ಲಿ ಇಲ್ಲಿ ನವಲಿಂಗೇಶ್ವರ ದೇವಾಲಯ ೯ ಶಿವಲಿಂಗಗಳನ್ನು ಹೊಂದಿದೆ. **ನವಲಿಂಗ** ವೆಂತಲೂ ಮತ್ತು **ಒಂಭತ್ತೇಶ್ವರ** ಗುಡಿಯೆಂತಲೂ ಕರೆಯುವರು,ಇವರ ಕಾಲದಲ್ಲಿನ ರಾಜೂರು, ಕುಕನೂರಿನ ದೇವಾಲಯಗಳು ಮಹತ್ವ ಪಡೆದಿವೆ.

**ಕಲ್ಲೂರ ಶ್ರೀ ಕಲ್ಲಿನಾಥೇಶ್ವರ ದೇವಾಲಯ**

**ದೂರ :**

ತಾಲೂಕಿನಿಂದ : ೩೪ ಕಿ.ಮೀ.

ಜಿಲ್ಲೆಯಿಂದ : ೦೬ ಕಿ.ಮೀ



ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಕಲ್ಲೂರ ಒಂದು ಪುಟ್ಟ ಗ್ರಾಮ. ಅಲ್ಲಿನ ಜನಸಂಖ್ಯೆ ಸುಮಾರು ೪೦೦೦. ಈ ಗ್ರಾಮ ಪ್ರಾಚೀನ ಕಾಲದಿಂದಲೇ ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಅದಕ್ಕೆ ಕಾರಣ ಆದಿದೇವನಾದ **"ಶ್ರೀ ಕಲ್ಲಿನಾಥೇಶ್ವರ".** ಕುಕನೂರ ಹಾಗೂ ಯಲಬುರ್ಗಾದ ಮಾರ್ಗದಲ್ಲಿದೆ.

**ವೈಶಿಷ್ಟ್ಯ:** ಸುಮಾರು ಕ್ರಿ.ಶ.೧೦೯೮ರಲ್ಲಿ ಈ ದೇವಾಲಯ ನಿರ್ಮಾಣವಾಗಿರಬಹುದೆಂದು ದೇವಾಲಯದ ಗರ್ಭಗುಡಿಯ ಒಳಗಿರುವ ಶಾಸನ ನಂ. ೧೭ರಲ್ಲಿ ಮಾಹಿತಿ ಇದೆ. ಮೊದಮೊದಲು ಈ ದೇವರನ್ನು **"ಸ್ವಯಂಬು ಕಲಿದೇವಸ್ವಾಮಿ"** ಎಂದು ಕರೆಯಲಾಗಿದೆ. ಸು ಕ್ರಿ.ಶ.೧೧೮೬ರವರೆಗೆ ಇದೇ ಹೆಸರು ಇತ್ತು. ಆದರೆ ಸು ಕ್ರಿ.ಶ.೧೪೭೨ರಲ್ಲಿ ಈ ಹೆಸರು **"ಕಲ್ಲೂರು ಕಲ್ಲಯ್ಯ ದೇವರು"** ಎಂದು ಬದಲಾಗಿದ್ದು ತಿಳಿಯುತ್ತದೆ.

ಈ ದೇವಾಲಯವನ್ನು ಯಾರು? ಯಾವಾಗ ನಿರ್ಮಿಸಿದರು ಎಂಬ ಮಾಹಿತಿ ಇನ್ನು ದೊರೆತಿಲ್ಲ. ಆದರೆ ಕಾಲಕಾಲಕ್ಕೆ ಇತಿಹಾಸ ಬದಲಾದಂತೆ ಈ ದೇವಾಲಯದ ಸಮುಚ್ಛಯದಲ್ಲಿ ಗರ್ಭಗುಡಿಯ ಸುಖನಾಸಿಗಳ ಶಿಲ್ಪಕಲೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಈ ದೇವಾಲಯವು "ಬಾದಾಮಿ ಚಾಲುಕ್ಯರ" ಕಾಲ (ಸು. ಕ್ರಿ.ಶ. ೮, ೯ನೇ ಶತಮಾನ)ದಲ್ಲಿ ನಿರ್ಮಾಣವಾಗಿರಬಹುದು.

# ಕೊಪ್ಪಳ ತಾಲೂಕಿನ ಪ್ರೇಕ್ಷಣೀಯ ಸ್ಥಳಗಳು

**ಕೊಪ್ಪಳ ಕೋಟೆ:**

**ದೂರ :**

ತಾಲೂಕಿನಿಂದ : ೫ ಕಿ.ಮೀ.

ಜಿಲ್ಲೆಯಿಂದ : ೫ ಕಿ.ಮೀ.



ಕೊಪ್ಪಳ ಕೋಟೆಯು ಅತ್ಯಂತ ಸುಭದ್ರವಾದ ಕೋಟೆಯಾಗಿದೆ. ೧೮೫೭ರ ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ದಕ್ಷಿಣ ಭಾರತ ಸ್ತಬ್ದವಿದ್ದರೆ ಕೊಪ್ಪಳದ ಈ ಕೋಟೆಯಲ್ಲಿ ಸಂಗ್ರಾಮದ ಕಿಡಿಯನ್ನು ಜಮೀನ್ದಾರ ವೀರಪ್ಪನು ಹತ್ತಿಸಿ ದಂಗೆಯನ್ನು ಪ್ರಾರಂಭಿಸಿದನು. ಕೊಪ್ಪಳವನ್ನು ವಶಪಡಿಸಿಕೊಳ್ಳಲು ಬ್ರಿಟೀಷರು ಹೈದ್ರಾಬಾದ್ ಮತ್ತು ಸಿಕಂದ್ರಾಬಾದ್ ನಿಂದ ದೊಡ್ಡದಾದ ಸೈನ್ಯವನ್ನು ತಂದು ವೀರಪ್ಪನನ್ನು ಸೋಲಿಸಬೇಕಾಯಿತು.

ಈ ದಂಗೆ ಪ್ರಾರಂಭದಿಂದ ೧೮೫೮ರ ಮೇ ತಿಂಗಳು ಮುಂಡರಗಿ ಭೀಮರಾಯ ಹಮ್ಮಿಗಿಯ ಕೆಂಚನಗೌಡದೇಸಾಯಿ ಬ್ರಿಟೀಷರಿಂದ ಕೊಪ್ಪಳ ಕೋಟೆಯನ್ನು ವಶಪಡಿಸಿಕೊಂಡಿದ್ದರು.

ಸ್ವತಂತ್ರವೀರರಾದ ಕೊಪ್ಪಳದ ಜನರು ಭೀಮರಾಯನ ಸೈನ್ಯವನ್ನು ಸ್ವಾಗತಿಸಿ ಅವರ ಸೈನ್ಯವನ್ನು ಸೇರಿದರು. ಕೊಪ್ಪಳ ವಶಪಡಿಸಿಕೊಳ್ಳುವದಕ್ಕೆ ಧಾರವಾಡ ಬಳ್ಳಾರಿ ರಾಯಚೂರಿನಿಂದ ಸೈನ್ಯಗಳನ್ನು ತರಿಸಿದರೂ ಕೋಟೆಯನ್ನು ಒಡೆದು ಒಳಗೆ ಹೋಗುವದು ಅಸಾಧ್ಯವಾಗಿತ್ತು. ಭೀಮರಾಯನನ್ನು ಹಿಡಿದು ಆತನ ತಲೆ ಕಡಿದು ತಂದವರಿಗೆ ೫೦೦೦ ಸಾವಿರ ರೂ ಕಾಣಿಕೆ ನೀಡುವದಾಗಿ ಘೋಷಿಸಿತ್ತು. ಕೆಳಕೋಟೆಯ ಕಾವಲುಗಾರನ ಒಳಸಂಚಿಗೆ ಒಳಗಾಗಿ ಬಾಗಿಲು ತೆರೆದಿದ್ದರಿಂದ ಈ ಕೋಟೆ ಬ್ರಿಟೀಷರ ಕೈ ಸೇರಲು ಕಾರಣವಾಯಿತು. ಆದರೆ ಹಮ್ಮಿಗೆ ಕೆಂಚನಗೌಡ ಮತ್ತು ಮುಂಡರಗಿಯ ಭೀಮರಾಯರು ಇವರ ಕೈಗೆ ಸಿಗದೆ ತಮ್ಮಷ್ಟಕ್ಕೆ ತಾವೇ ಗುಂಡು ಹಾರಿಸಿಕೊಂಡು ವೀರಮರಣವನ್ನು ಅಪ್ಪಿದರು.

ಶಿವಾಜಿ, ಹೈದರಲಿ, ಅಂತಹವರ ವಶದಲ್ಲಿದ್ದ ಈ ಕೋಟೆಯನ್ನು ಹೈದರ ಅಲಿ ಕಾಲದ ಮಹ್ಮದುಸ್ಮಾನ ಕೋವಾರ ಕೋಪ್ಪಳ ಕೋಟೆಯ ಎರಡನೇಯ ಬಾಗಿಲು ಮತ್ತು ಬಹದ್ದೂರಬಂಡಾ ಕೋಟೆಗಳ ಕೆಲವು ಭಾಗಗಳನ್ನು ಕಟ್ಟಿಸಿದ್ದು ಟಿಪ್ಪು ಈಸ್ಥಳವನ್ನು **ಸುಲ್ತಾನಗಡ** ಎಂದು ಹೆಸರಿಸಿದ್ದನು, ಕಿತ್ತೂರಿನ ಮಲ್ಲ ಸರ್ಜನನ್ನು ಇಲ್ಲಿಯೇ ಬಂಧಿಸಿ ಇಡಲಾಗಿತ್ತು ಎಂದು ನಂಬಲಾಗಿದೆ, ಇದೇ ಕೋಟೆಯ ಪಕ್ಕದಲ್ಲಿ ಹುಲಿಕೆರೆ ಹಾಗು ಮರ್ದಾನ ಅಲಿ ದರ್ಗಗಳು ಕೋಟೆಯ ಅಂದವನ್ನು ಹೆಚ್ಚಿಸಿವೆ.

**ಶ್ರೀ ಗವಿಸಿದ್ದೇಶ್ವರ ಮಠ**

**ದೂರ :**
ತಾಲೂಕಿನಿಂದ : ೫ ಕಿ.ಮೀ.
ಜಿಲ್ಲೆಯಿಂದ : ೫ ಕಿ.ಮೀ.



ಐತಿಹಾಸಿಕ ಹಿನ್ನಲೆ ಪಡದಿರುವ ಕೊಪ್ಪಳದ ಶ್ರೀ ಗವಿ ಮಠವು ಈ ಭಾಗದ ಶೈಕ್ಷಣಿಕ ಪ್ರಗತಿಗೆ ಮಹತ್ತರ ಕೂಡುಗೆಯನ್ನು ನೀಡಿದೆ. ಶ್ರೀ ಮಠವು ಅನೇಕ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಂಸ್ಕೃತ ವೇದ,ಉಪನಿಷತ್ತು, ಅಭ್ಯಾಸ ನಿರತರಿಗೆ ಆಶ್ರಯ

ತಾಣವೆನಿಸಿದೆ. ಜಗದ್ಗುರು ಮರಿಶಾಂತವೀರ ಮಹಾಸ್ವಾಮಿಗಳ ಕಾಲದಲ್ಲಿ ಕೊಪ್ಪಳ ಕುಕನೂರಿನಲ್ಲಿ ಪ್ರಾರಂಭಗೊಂಡ ಸಂಸ್ಥೆಗಳು ಇಂದು ದ್ವಿಗುಣಗೊಂಡಿವೆ, ಪ್ರತಿ ವರ್ಷ ನೆಡೆಯುವ ಜಾತ್ರೆ ನಾಡಿನ ಪ್ರಸಿದ್ಧ ಜಾತ್ರೆಗಳಲ್ಲಿ ಒಂದು ಪ್ರಾಚೀನ ಸ್ಥಳವಾದ ಇಲ್ಲಿನ ಬೆಟ್ಟಗಳ ಸಾಲಿನಲ್ಲಿ ಪ್ರಸಿದ್ಧ **ಚಕ್ರವರ್ತಿ ಅಶೋಕನ ಶಿಲಾ ಶಾಸನ** ಇಲ್ಲಿದೆ.

ಗವಿಮಠದ ಅಶೋಕನ ಶಾಸನವನ್ನು ಎತ್ತರದ ಗೋಡೆಯ ಮೇಲೆ ಕೆತ್ತಲಾಗಿದೆ ಮತ್ತು ಇದು ಬ್ರಾಹ್ಮಿ ಲಿಪಿಯಲ್ಲಿದೆ. ಕ್ರಿ.ಪೂ. ೩ನೇ ಶತಮಾನದ್ದಾಗಿದೆ.

ಎರಡು ಗವಿಗಳಲ್ಲಿ ಹಿಂಭಾಗದಲ್ಲಿ ಇತ್ತಿಚಿಗೆ ಹಳದಿ ಮಿಶ್ರಿತ ಬಿಳಿಯ ಬಣ್ಣದ ಪುರಾತನ ಚಿತ್ರಗಳು ಬೆಳಕಿಗೆ ಬಂದಿವೆ. ಮನುಷ್ಯರ ಮತ್ತು ಪ್ರಾಣಿಗಳ ಚಿತ್ರಗಳ ಸಮೂಹವಿದೆ. ಪಶ್ಚಿಮಕ್ಕಿರುವ ಗವಿಗಳಲ್ಲಿ ಜೈನ ಸಮುದಾಯದ ಪ್ರತೀಕಗಳಿದ್ದು ಇದೇ ರೀತಿ ರೇಖಾ ಚಿತ್ರಗಳು, ಬಸದಿಗಳು, ಜೀನರ ವಾಸಸ್ಥಾನದ ಕ್ಷೇತ್ರವಾಗಿದೆ. ಗಂಗಾವತಿಯಲ್ಲಿನ ಹಿರೇಬೆಣಕಲ್ಲಿನಲ್ಲಿ ಮತ್ತು ನಾರಾಯಣ ಪೇಟೆಯಲ್ಲಿ ಇಂದಿಗೂ ಇದೇ ರೀತಿಯಾದ ಗುಹಾ ಚಿತ್ರಗಳನ್ನು ಕಾಣಬಹುದು.

**ಕೊಪ್ಪಳದ ಇಂದ್ರಕೀಲ ಪರ್ವತ**

**ದೂರ ;**
ತಾಲೂಕಿನಿಂದ : ೩ ಕಿ.ಮೀ.
ಜಿಲ್ಲೆಯಿಂದ : ೩ ಕಿ.ಮೀ.



ಮಹಾಭಾರತದಲ್ಲಿ ಅರ್ಜುನ ತಪಸ್ಸು ಮಾಡಿದ ಸ್ಥಳ. ಈ ಪರ್ವತದಲ್ಲಿ ಅರ್ಜುನ ಬೆರಳುಗಳು, ಬಳಸಿದ ಖಡ್ಗ, ತಪಸ್ಸನ್ನ ವೀಕ್ಷಿಸುತ್ತಿದ್ದ ಹಾವೊಂದು ಕಲ್ಲುಗಳಾಗಿ ನಿಂತಿವೆ ಎಂಬ ಪ್ರತೀತಿ ಇದೆ. ಈ ಪ್ರದೇಶ ಇಂದು **ಮಳೆಮಲ್ಲೇಶ್ವರ ಗುಡ್ಡ** ಎಂದು ಖ್ಯಾತಿಯಾಗಿದ್ದು, ಪ್ರತಿವರ್ಷ ಶ್ರಾವಣಮಾಸದ ಕೊನೆಯ ಭಾನುವಾರ ಇಲ್ಲಿ ಜಾತ್ರೆ ನಡೆಯುತ್ತದೆ. ಇಲ್ಲಿರುವ ಉದ್ಭವ ಶಿವಲಿಂಗದ ಹಿಂದೆ ಗವಿಯೊಂದಿದ್ದು ಸದಾ ಕಾಲ ನೀರು ಹರಿಯುತ್ತದೆ. ಎಂಥ ಬರಗಾಲವಿದ್ದರೂ **'ಬತ್ತದ ಗಂಗೆ'** ಈ ಜೀವಜಲ. ಸುಮಾರು ಕ್ರಿ.ಶ. 1205ರ ಶಿಕಾರಿಪುರ ಶಾಸನದ ಪ್ರಕಾರ **"ಧಾರಣಿಗೆ ನೆಗ್ಗಗಳ ಕೋಪಣ"** ಜೈನ ಬಸದಿಗಳ ಬೀಡಾಗಿ ಜೈನರ ಧಾರ್ಮಿಕ ಕೇಂದ್ರವಾಗಿತ್ತು. ಅಶೋಕನ ಶಿಲಾಶಾಸನ ಇರುವ **"ಫಲ್ಕಿಗುಂಡು"** ಇದೇ ಸ್ಥಳದಲ್ಲಿದ್ದು, ಅಶೋಕನ ಸಾಮ್ರಾಜ್ಯ ವಿಸ್ತಾರವನ್ನು ಇದು ತಿಳಿಸುತ್ತದೆ. ಬೆಟ್ಟಗುಡ್ಡಗಳ ಮಧ್ಯದಲ್ಲಿರುವ ಇದು ಅತ್ಯಂತ ಸುಂದರವಾದ ತಾಣವಾಗಿದೆ.

**ಕೊಪ್ಪಳದ ಅಶೋಕನ ಶಾಸನಗಳು**

**ದೂರ :**

ತಾಲೂಕಿನಿಂದ : ೧ ಕಿ.ಮೀ.

ಜಿಲ್ಲೆಯಿಂದ : ೧ ಕಿ.ಮೀ.



ಮೌರ್ಯ ಸಾಮ್ರಾಟ ಅಶೋಕ ಚಕ್ರವರ್ತಿಯ ಎರಡು ಧರ್ಮ ಶಾಸನಗಳು ಕೊಪ್ಪಳದ ಪ್ರಸಿದ್ಧ ಶ್ರೀ ಗವಿಸಿದ್ದೇಶ್ವರ ಮಠದ ಹಾಗೂ ಇಂದ್ರಕೀಲ ಪರ್ವತದ ಹಿಂಬಾಗದಲ್ಲಿ ಇದ್ದು, ಅಶೋಕನನ್ನು **'ದೇವನಾಂಪ್ರಿಯ'**ನೆಂದು ವರ್ಣಿಸಿದೆ. ಈ ಶಾಸನ ಕ್ರಿ.ಪೂ. 3 ನೇ ಶತಮಾನದ್ದಾಗಿದ್ದು, ಅಶೋಕನ ಸಾಮ್ರಾಜ್ಯ ವಿಸ್ತಾರವನ್ನು ನಾವು ಇದರಿಂದ ತಿಳಿಯಬಹುದಾಗಿದೆ. ಇದು ಬ್ರಾಹ್ಮಿ ಲಿಪಿಯಲ್ಲಿದೆ.

**ಭಾಗ್ಯನಗರ ಕೈಮಗ್ಗ**

**ದೂರ ;**

ತಾಲೂಕಿನಿಂದ : ೩ ಕಿ.ಮೀ.

ಜಿಲ್ಲೆಯಿಂದ : ೩ ಕಿ.ಮೀ.



ಜಿಲ್ಲಾ ಕೇಂದ್ರಕ್ಕೆ ಹೊಂದಿಕೊಂಡಿರುವ ಭಾಗ್ಯನಗರ ಕೂದಲು ಉದ್ಯಮ, ನೇಕಾರಿಕೆ ಹಾಗೂ ಭಾಗ್ಯನಗರದ ದಡಿ ಸೀರೆಗಳಿಗೆ, ಚಾದರಗಳಿಗೆ ಬೇಡಿಕೆ ಇತ್ತು. ಇತ್ತಿಚಿಗೆ ನೇಕಾರಿಕೋದ್ಯಮ ಬಹುತೇಕ ನಿಂತು ಹೋಗಿದೆ. ಈಗ ಭಾಗ್ಯನಗರದ ಕೂದಲೋದ್ಯಮ ರಾಜ್ಯದಲ್ಲಿಯೇ ಲಾಭದಾಯಕ ಉದ್ದಿಮೆಯಾಗಿದ್ದು, ನೇಕಾರೆಲ್ಲ ಇದರಲ್ಲಿ ತೊಡಗಿಕೊಂಡಿದ್ದಾರೆ. ಭಾಗ್ಯನಗರದಲ್ಲಿ ಸಂಸ್ಕರಣಗೊಂಡ ಕೂದಲುಗಳಿಗೆ ಇಂದಿಗೂ ವಿದೇಶದಲ್ಲಿ ಭಾರಿ ಬೇಡಿಕೆ ಇದೆ. ಕೂದಲು ಉದ್ಯಮ ಲಾಭದಾಯಕ ಉದ್ದಿಮೆಯಾದ್ದರಿಂದ ಭಾಗ್ಯನಗರದ ತುಂಬೆಲ್ಲಾ ಅನೇಕ ಕೂದಲು ಸಂಸ್ಕರಣಾ ಘಟಕಗಳಿವೆ.

**ಬಹದ್ದೂರಬಂಡಿ ಕೋಟೆ**

**ದೂರ ;**

ತಾಲೂಕಿನಿಂದ : ೩ ಕಿ.ಮೀ.

ಜಿಲ್ಲೆಯಿಂದ : ೩ ಕಿ.ಮೀ.



ಬೆಳಗಾವಿಯ ಸುಬೇದಾರರು ಕೊಪ್ಪಳದ ಹತ್ತಿರವಿರುವ ಗುಂಟಾಪುರಕ್ಕೆ ಬಂದಾಗ, ಇಲ್ಲಿನ ಬೆಟ್ಟವನ್ನು ನೋಡಿ ಕೋಟೆಯನ್ನು ಕಟ್ಟಲು ಹಿಜರಿ ಶಕೆ 1076 ಕ್ರೋಧನಾಮ ಸಂವತ್ಸರ ವೈಶಾಖ ಬಹುಳ ಪಂಚಮಿ ಶನಿವಾರ ದಿವಸ ಕಿಲ್ಲೆಯನ್ನು ಕಟ್ಟಲು ಪ್ರಾರಂಭಿಸಿದರು. ಅದೇ ರೀತಿ ಕೋಟೆಯೊಳಗೆ ಮಹಾದೇವರ ಗುಡಿಯನ್ನು ಗ್ರಾಮ ರಕ್ಷಣೆಗಾಗಿ ಕಟ್ಟಿಸಲಾಗಿದೆ. ಇಲ್ಲಿನ ತಂಡದ ನಾಯಕರಾದ ರಾಜೂಜಿ ನಾಯ್ಕ, ಲಸ್ಕರಿ ನಾಯ್ಕ , ಇವರು ಗೊಸಾಯಿ ಬಾವ ಇವರನ್ನು ಕಿಲ್ಲೆಯ ಕಾವಲಿಗೆ ನೇಮಕ ಮಾಡಿದರು. ಕಿಲ್ಲೆದಾರ ಹಿಜರಿ 1114 ಕ್ಕೆ ಬಂದು ಇಳಿದರು. ಬಾಜಿರಾಯರು ತೀರಿದ ಮೇಲೆ ಸೈನವನ್ನು ಬಿಟ್ಟು ಹೋಗಿದ್ದರು. ಕಿಲ್ಲೆಯಲ್ಲಿ ಆಗ ಟಿಪ್ಪುಸುಲ್ತಾನರು ಬಾಜಿರಾಯರ ಸೈನವನ್ನು ಹೋಡೆದೋಡಿಸಿ ವಶಪಡಿಸಿಕೊಂಡರು. ಆಗ ಈ ಊರಿನ **'ಗುಂಟಾಪೂರ'** ಎಂಬ ಹೆಸರು ತಗೆದು **'ಬಹಾದ್ದೂರಬಂಡಿ'** ಎಂದು ತನ್ನ ಸವಿನೆನಪು ಉಳಿಯಲೆಂದು ಸುಲ್ತಾನ ಬೇಸ್‌ನು (ಅಗಸಿ)ನ್ನು ಕಟ್ಟಿಸಿದ. ರಾಣಿ ಮಹಲ್‌ನ್ನು ಕಟ್ಟಿಸಿದ ಆಗ ತಂಡದ ನಾಯಕರಾಗಿದ್ದ ರಾಜೋಜಿನಾಯ್ಕ- ಲಸ್ಕರಿನಾಯ್ಕ ಬೆಳಗಾಂವ ಬಾಜಿರಾಯರು ಇವರಿಗೆ ನಾಲ್ಕುನೂರ ಎಕರೆ ಜಮೀನನ್ನು ಇನಾಮುವಾಗಿ ಹಾಕಿ ಕೊಟ್ಟಿದ್ದ. ಪ್ರತಿ ವರ್ಷ ಈ ಬಾವಾಜಿ ಗುರುವಿನ ಕಟ್ಟೆಯ ಮುಂದೆ ಎರಡು ಬಣ್ಣದ ಬಾವಿಯನ್ನು ತೊಡಿ ಅದರಲ್ಲಿ ಬಣ್ಣವನ್ನು ಕಲಿಸಿ ಸುತ್ತ ಹಳ್ಳಿಯಿಂದ ತಂಡ ತಂಡವಾಗಿ ಲಂಬಾಣಿ ಜನರು ದವಸಧಾನ್ಯವನ್ನು ತೆಗೆದುಕೊಂಡು ಕುದುರಿಯ ಮೇಲೆ ಎತ್ತಿನ ಮೇಲೆ ಈ ಗುರುವಿನ ಕಟ್ಟೆಗೆ ಧಾನವಾಗಿ ನೀಡುತ್ತಿದ್ದರು ಹಾಗೂ ಲಂಬಾಣಿ ಜನರು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಮಾಡಿ ಸಂತೋಷ ಪಟ್ಟು ಹೋಳಿ ಕಾಮದಹನವನ್ನು ಇಲ್ಲಿಯೇ ಬಹಾದ್ದೂರಬಂಡಿ ಸ್ಥಳದಲ್ಲಿಯೇ ಮೂಲೆಮೂಲೆಯಿಂದ ಬಂದಂತಹ ಲಂಬಾಣಿ ಜನರು ಆಚರಣೆ ಮಾಡುತ್ತಿದ್ದರು. ಈ ಬಾವಾಜಿ ಗುರುವಿನ ಕಟ್ಟೆಯಲ್ಲಿ ಹಾತಿರಾಮ ಬಾವಜಿಯವರು 41 ದಿವಸ ಉಪವಾಸ ಸತ್ಯಾಗ್ರಹವನ್ನು ಮಾಡಿ ಕೀರ್ತಿಯನ್ನು ಗಳಿಸಿ ತಿರುಪತಿಯಲ್ಲಿ ನೆಲಸಿದರು.

**ಗುಮ್ಮಣ್ಣನ ಗವಿ**

**ದೂರ ;**

ತಾಲೂಕಿನಿಂದ : ೩ ಕಿ.ಮೀ.

ಜಿಲ್ಲೆಯಿಂದ : ೩ ಕಿ.ಮೀ.

ಕೊಪ್ಪಳದ ಮಳೆಮಲ್ಲೇಶ್ವರ ಗುಡ್ಡ ದಾಟಿ 3 ಕಿ. ಮೀ. ಕ್ರಮಿಸಿದರೆ ಸಿಗುವ ಪುಟ್ಟ ಗ್ರಾಮ ಮಂಗಳಾಪುರದ ಗುಮ್ಮಣ್ಣನ ಗವಿ.

ಕೊಪ್ಪಳದ ಮಳೆ ಮಲ್ಲೇಶ್ವರ ಬೆಟ್ಟದ ಪಶ್ಚಿಮಕ್ಕೆ ಈ ಗವಿ ಕಂಡು ಬರುವದು ಇದು ಉತ್ತರಾಭಿಮುಖವಾಗಿ ೬೦ ಅಡಿ ಉದ್ದ ೧೦ ಅಡಿ ಅಗಲ ಹೊಂದಿದೆ. ಇಲ್ಲಿ ಈಶ್ವರ, ನಂದಿ, ವೀರಭದ್ರ ಮೂರ್ತಿಗಳನ್ನು ಕಾಣಬಹುದು. ಹಿಂದೆ ಗವಿಯಲ್ಲಿನ ಶಿವ ಲಿಂಗವು ಮಳೆ ಮಲ್ಲೇಶ್ವರ

ಶಿವಲಿಂಗಾಕಾರದಲ್ಲಿದ್ದು ಕಡಿದಾದ ಶಿಲೆಯಲ್ಲಿ ವೀರಭದ್ರ ಮೂರ್ತಿ ಇದೆ. ನಂದಿ ಇದ್ದು ಸ್ಥಾನ ಪಲ್ಲಟಗೊಂಡಿದೆ. ಸನಿಹದಲ್ಲೇ ಸಿಹಿ ನೀರಿನ ಝರಿ ಇದ್ದು ಇದನ್ನು **ಶಿವಪರಿವಾರದ ಗವಿ**ಯೆಂದು ಅರ್ಥಮಾಡಿಕೊಳ್ಳಬಹುದಾಗಿದೆ

ಈ ಭಾಗದ ಹಿರಿಯರ ಅಭಿಪ್ರಾಯದಂತೆ ಮಳೆಮಲ್ಲೇಶ್ವರ ದೇವಸ್ಥಾನಕ್ಕೆ ಹೋಗುವ ಭಕ್ತರು ತಮ್ಮ ಎತ್ತು, ಚಕ್ಕಡಿಗಳನ್ನು ನಿಲ್ಲಿಸಿ ಗುಮ್ಮಣ್ಣನಿಗೆ ಪೂಜೆ ಸಲ್ಲಿಸಿ ನಂತರ ಮಳೆಮಲ್ಲೇಶ್ವರಕ್ಕೆ ಹೋಗುವುದು ರೂಢಿಯಲ್ಲಿತ್ತಂತೆ ಟಾರ್ ರಸ್ತೆ ಆದ ಬಳಿಕ ಈ ರೂಢಿ ಕಣ್ಮರೆಯಾಯಿತು. ಅಂತೆಯೇ ಗುಮ್ಮಣ್ಣ ಗವಿಯಿಂದಾಚೆ ಬರಲಿಲ್ಲ. ಗವಿಯ ಮುಂದೆ ಚೌಕಾಕಾರದಲ್ಲಿರುವ ಕಟ್ಟೆ, ದೊರೆಯುವ ಪಣತಿ ಮತ್ತಿತರ ವಸ್ತುಗಳು ಇಲ್ಲಿ ಹಿಂದೆ ಊರ್ಜಿತ ಸ್ಥಿತಿಯಲ್ಲಿ ಒಂದು ಪವಿತ್ರ ಸ್ಥಾನವಿತ್ತೆಂದು ಹೇಳಲಾಗುತ್ತದೆ.

**ಮರ್ದಾನ ಅಲಿ ದರ್ಗಾ ಕೊಪ್ಪಳ**

**ದೂರ ;**
ತಾಲೂಕಿನಿಂದ : ೧ ಕಿ.ಮೀ.
ಜಿಲ್ಲೆಯಿಂದ : ೧ ಕಿ.ಮೀ.



ದರ್ಗಾವು ಬೆಟ್ಟದಲ್ಲಿದೆ. ಇದು ಒಟ್ಟು ೨೦೭ ಮೆಟ್ಟಿಲುಗಳನ್ನು ಹೊಂದಿದೆ. ಮೊದಲು ಮೆಟ್ಟಿಲುಗಳು ಇರಲಿಲ್ಲ ಈಗ ಭಕ್ತರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ರಚಿಸಿದ್ದಾರೆ.

ಅಲ್ಲಿಯ ವಿಶೇಷತೆ ಮತ ಮಹಿಮೆ ಏನೆಂದರೆ ಅಲ್ಲಿ ಹರಕೆ ಹೊತ್ತರೆ ಅದು ನೆರವೇರುತ್ತದೆ. ಹರಕೆ ನೆರವೇರಿದವರು ದರ್ಗಾದಲ್ಲಿ ಊಟ ಮಾಡಿಸುತ್ತಾರೆ. ಅದು **'ನಿಯಾಜ್'** ರೂಪದಲ್ಲಿ. **'ಉರಸು'** ಬಹಳ ಅದ್ದೂರಿಯಾಗಿ ನಡೆಯುತ್ತದೆ. ಬಹಳಷ್ಟು ಭಕ್ತರು ಬರುತ್ತಾರೆ. ವಿಶೇಷವಾಗಿ ಪ್ರತಿ ಶುಕ್ರವಾರ ನಮಾಜ್ ನಡೆಯುತ್ತದೆ. ಅದೇ ದರ್ಗಾದ ಕೆಳಗಡೆ ಬಂದಂತೆ ಒಂದು ಮದುವೆ ಮಂಟಪ ಮತ್ತು ಒಂದು ವಿಶ್ರಾಂತಿ ಧಾಮವಿದೆ. ಅಲ್ಲಿಯ ಇನ್ನೊಂದು ಸಣ್ಣ ದರ್ಗಾವಿದೆ. ಅದರ ಹೆಸರು **'ಹಬೊರ ಷಾ ಅಲಿ'** ದರ್ಗಾ ಅಲ್ಲಿ ಬಹಳ ತಂಪಾದ ವಾತಾವರಣವಿದ್ದು ಮನಸ್ಸಿಗೆ ಶಾಂತಿ, ನೆಮ್ಮದಿಯನ್ನುಂಟು ಮಾಡುತ್ತದೆ.

**ವಿಶೇಷತೆ :** ದರ್ಗಾದ ಪೂರ್ಣ ಹೆಸರು ಸರಕಾರ ಸೈಯದನಾ ಷಾ ಹಜರತ್ ಮರ್ದಾನೆ ಗೈಯಬ್ ದರ್ಗಾ ದರ್ಗಾದ 'ಉರುಸು' ಪ್ರತಿ ವರ್ಷ ಫೆಬ್ರುವರಿ ತಿಂಗಳದಲ್ಲಿ ಜರುಗುತ್ತದೆ.

**ಶ್ರೀ ಕ್ಷೇತ್ರ ಹುಲಗಿ**

**ದೂರ ;**

ತಾಲೂಕಿನಿಂದ : ೧೯ ಕಿ.ಮೀ.

ಜಿಲ್ಲೆಯಿಂದ : ೧೯ ಕಿ.ಮೀ.



ತುಂಗಭದ್ರಾ ನದಿಯ ದಡದಲ್ಲಿ ಈ ದೇವಸ್ಥಾನವಿದ್ದು, ಕೊಪ್ಪಳ ತಾಲೂಕಿನಲ್ಲಿ ಬರುವ ಹುಲಗಿ ಶ್ರೀ ಕ್ಷೇತ್ರದಲ್ಲಿ ಹುಲಿಗೆಮ್ಮದೇವಿಯ ಸ್ಥಾಪನೆ ಸುಮಾರು ೮೦೦ ವರ್ಷಗಳ ಹಿಂದಿನ ಇತಿಹಾಸವಿದೆ.

ಹುಲಿಗಿಯಲ್ಲಿ ಪ್ರತಿ ವರ್ಷವೂ ಆಗಿ ಹುಣ್ಣಿಮೆಯಿಂದ ಕಾರ ಹುಣ್ಣಿಮೆಯವರೆಗೆ ಜಾತ್ರೆ ನಡೆಯುತ್ತದೆ. ಮೂರು ದಿನಗಳು ಪ್ರಮುಖವಾದ ಪೂಜೆಗಳು ನಡೆಯುತ್ತವೆ. ಮೊದಲ ದಿನ ಅಕ್ಕಿಪಡಿ ಎರಡನೆಯ ದಿನ ಬಾಳಿದಂಡಿಗೆ ಮೂರನೇ ದಿನ ಅಗ್ನಕೊಂಡ, ಪಾಯಸ ಈ ರೀತಿಯಾಗಿ ಒಂದು ತಿಂಗಳವರೆಗೆ ಜಾತ್ರೆ ನಡೆಯುತ್ತದೆ. ಇಲ್ಲಿ ಜೋಗತಿಯರು ಹೆಚ್ಚಿನ ಸಂಖ್ಯೆಯಲ್ಲಿದ್ದು, ಬೇರೆ ಬೇರೆ ರಾಜ್ಯಗಳಿಂದ ಇಲ್ಲಿ ಭಕ್ತಾಧಿಗಳು ಜಾತ್ರೆ ಹೊತ್ತಿಗೆ ಬಂದು ಸೇರುತ್ತಾರೆ.

**ಕುಮಾರ ರಾಮನ ಕಮ್ಮಟದರ್ಗ**

**ದೂರ ;**

ತಾಲೂಕಿನಿಂದ :೧೯ ಕಿ.ಮೀ.

ಜಿಲ್ಲೆಯಿಂದ : ೧೯ ಕಿ.ಮೀ.



ಕೊಪ್ಪಳ ತಾಲೂಕಿನ ಪೂರ್ವಕ್ಕೆ ಜಬ್ಬಲ ಗುಡ್ಡ ಹಳೇಕುಮಟಾ ಗ್ರಾಮಗಳ ಮದ್ಯ ಭಾಗದ ಬೆಟ್ಟಗಳಲ್ಲಿಯೇ ಹಿಂದಿನ ಕಮ್ಮಟದುರ್ಗ ರಾಜ್ಯವಿದ್ದು ಕೋಟೆ ಕೊತ್ತಲಗಳು, ಮುರುಕು ಮಂಟಪಗಳು, ಹಾಳಾದ ದೇವಾಲಯಗಳು, ಅರಮನೆಯ ಗುರುತುಗಳು ವೀರಗಲ್ಲು ಶಿಲಾಶಾಸನಗಳಿವೆ.

ಕ್ರಿ.ಶ. 1280 ರಿಂದ 1330ರ ಕಾಲಾವಧಿಯಲ್ಲಿ ಕಮ್ಮಟ ದುರ್ಗದ ಇತಿಹಾಸ ಕಂಡು ಬರುತ್ತಿದ್ದು ಕುಮಾರ ರಾಮನ ತಾತ ಸಿಂಗೇಯ ನಾಯಕ. ತಂದೆ ಕಂಪಿಲರಾಯ ತಾಯಿ ಹರಿಹರದೇವಿ. ಮನೆ ದೇವರು ಜಟ್ಟಂಗಿ ರಾಮೇಶ್ವರ ಗಂಡು ಮಗು ಜನಿಸಿದ ನಂತರ ಆತನ ಹೆಸರಿನಿಂದ **'ರಾಮನಾಥ'** ಮತ್ತು **'ಕುಮಾರರಾಮ'** ಎಂದು ಕರೆದರು. ತುಂಗಭದ್ರ ನದಿ ಕಡಲ ಮೇಲೆ ಹೊಸಮಲೆದುರ್ಗವನ್ನು ಕಟ್ಟಿಸಿ ಅದನ್ನು ರಾಜಧಾನಿಯನ್ನು ಮಾಡಿಕೊಂಡ ಕಂಪಿಲರಾಯ, ಗುತ್ತಿರಾಜ ಜಗಪತಿರಾಯ ಓರಂಗಲ್ಲಿನ ಪ್ರತಾಪರುದ್ರ. ಹೊಯ್ಸಳ ವೀರಬಲ್ಲಾಳ ನೊಂದಿಗೆ ಹೋರಾಡಿದ. ತಂದೆ ಮಕ್ಕಳಿಬ್ಬರೂ ತೊರೆಗಲ್, ಬಾದಾಮಿ ಮುದಕಲ್, ಹಾನಗಲ್, ಕದಂವಳುನಾಡು, ನಿಡುಗಲ್, ಪೆನುಗೊಂಡ ಮೊದಲಾದ ಪ್ರದೇಶಗೆದ್ದನು. ತುಂಗಬದ್ರೆಯ ಎರಡು ದಂಡೆಯ ಮೇಲೂ ಅಧಿಪತ್ಯ ಸ್ಥಾಪಿಸಿದರು. ಕಪಿಲರಾಯ ಆನೆಗುಂದಿಯ (ಕಮ್ಮಟ ರಾಜ್ಯದ) ಎಲ್ಲ ಆಡಳಿತವನ್ನು ಕುಮಾರ ರಾಮನಿಗೆ ವಹಿಸಿದನು.



ಕುಮಾರ ರಾಮನು ಚಿಕ್ಕಮ್ಮ ರತ್ನಾಜಿ ಇವನ ಮೇಲೆ ಮೋಹ ಗೊಂಡಿದ್ದಳು. ಇವರ ಪ್ರಭಾವಕ್ಕೆ ಒಳಪಡುವ ಘಟನಾವಳಿಯಿಂದ ಬೈಚಪ್ಪನಾಯಕನಿಂದ ರಕ್ಷಣೆಗೆ ಒಳಗಾಗಿ ಬದುಕಿದನು. ಮಹ್ಮದಬೀನ್ ತೊಗಲಕ್ ದೆಹಲಿಸುಲ್ತಾನನ ಆಸ್ಥಾನಲ್ಲಿದ್ದ ಬಹದ್ದೂರ್ ಖಾನನಿಗೆ ರಾಜಕೀಯ ಆಶ್ರಯನೀಡಿ, ಸುಲ್ತಾನನನ್ನು ಎದುರುಹಾಕಿಕೊಂಡು ಸುಲ್ತಾನನೊಂದಿಗೆ ಹೋರಾಡಿದ ಕುಮಾರರಾಮನು ರಣಧೀರ ನಾಗಿ ಯುದ್ಧದಲ್ಲಿ ಸುಲ್ತಾನನ ಸೇನೆ ಹಿಮ್ಮೆಟ್ಟಿಸಿದನು. ಗಂಡರ ಗಂಡ, ಗರ್ವಿತರಾಯ, ಶುಂಭಭೇರುಂಡ, ಛಲದಂಕಮಲ್ಲ, ಚೆಲ್ವರಗಂಡ, ಕಹಿರಿಪುಡು, ಏಲಿಯಾ ಮಾತರಂಡ ಮೊದಲಾದ ಬಿರುದುಗಳನ್ನು ಗಳಿಸಿದನು. ಈ ಬಿರುದುಗಳು ದೆಹಲಿ ಸುಲ್ತಾನನಿಗೆ ತಲುಪಿ ಎರಡನೇ ಸಲ ನೇಮಿಸಿ ಮಲ್ಲುಕನನ್ನು ಕಮ್ಮಟದುರ್ಗ ವಿರುದ್ಧ ಕಳಿಸಿದನು. 2 ನೇ ಸಲವೂ ಸೋಲು ಅನುಭವಿಸಬೇಕಾಯಿತು. ಹಠಬಿಡದ ಸುಲ್ತಾನ **'ಮಾತಂಗಿ'** ಎಂಬ ವೀರ ಸ್ತ್ರೀಯ ಅಧೀನದಲ್ಲಿ ಬಂದ ಸೇನೆಯಲ್ಲಿ ಕಾಟಣ್ಣ, ಸಂಗಮದೇವ, ಬಹದ್ದೂರ ಖಾನ,

ಕುಮಾರರ ರಾಮರು ಅಸ್ತಂಗತರಾಗುತ್ತಾರೆ. ನಂಜುಂಡ ಕವಿಯು ಕುಮಾರ ರಾಮ ಸಾಂಗತ್ಯದಲ್ಲಿ ವೀರ ಕಾವ್ಯದಲ್ಲಿ ಮೂಡಿ ಬಂದದ್ದು ಐತಿಹಾಸಿಕ ಕೃತಿಯಾಗಿದೆ.

ವೈಶಾಖ ಬಹುಳ ಅಷ್ಟಮಿಯ ದಿನ ಅ ಜಾತ್ರನೆಡೆಯುತ್ತದೆ. ಇಂದರಗಿಯಲ್ಲಿ ಆರು ಕಟ್ಟಿಗೆಯ ರುಂಡಗಳನ್ನು, ಆನೆಗಳೊಂದಿಗೆ ಮಲ್ಲಾಪುರದಿಂದ ೨ ಹಿತ್ತಾಳೆಯ ರುಂಡಗಳನ್ನು ಜಬ್ಬಲಗುಡ್ಡದಿಂದ ೪ ಕಟ್ಟಿಗೆಯ ರುಂಡಗಳನ್ನು ಜನ ಜಾತ್ರಗಳಿಗೆ ತರುವರು. ಇವುಗಳಿಗೆ ರಾಮಸ್ವಾಮಿ, ಕಂಪಿಲ ರಾಯ ರಾಜಣ್ಣ, ಸಂಗಮದೇವ.ಓಲಿಕೆ ರಾಮಣ್ಣ. ಬೈಚಪ್ಪ.ಗಳೆಂದು ಕರೆಯುತ್ತಾರೆ ಕಮ್ಮಟ ದುರ್ಗದಲ್ಲಿನ ಪ್ರಸಿದ್ಧ ವ್ಯಕ್ತಿಯಾದ ರಾಮನಾಥನ ಮದುವೆ ಜಾತ್ರಯಲ್ಲಿ ನೆಡೆಯುವದು ಅಲ್ಲಿ ಮದುವೆ ಬಲಿದಾನ ವಿದಿವಿಧಾನ ಮಾಡುವದರ ಜೊತೆಗೆಪ್ರಾಣಿ ಬಲಿಯ ರಕ್ತ ಜೋಳದ ನುಚ್ಚಿನಲ್ಲಿ ಕಲಿಸಿ ವೀರಗೂಳೆಂದು ಹಂಚಲಾಗುವದು ಗ್ರಾಮಸ್ಥರು ಈ ವೀರಗೂಳನ್ನು ತಮ್ಮ ಊರಿಗೆ ಒಯ್ದು ತಮ್ಮ ಹೊಲಗಳಲ್ಲಿ ಭೂಮಿಗೆ ಅರ್ಪಿಸುವರು.

ಜಾತ್ರೆ ಮರುದಿನ ಕಮ್ಮಟದುರ್ಗದಿಂದ ಅಕ್ಕಿಯ ಪಡಿ ಹುಲಿಗಿಗೆ ಕೊಂಡ್ಯೊಯ್ದು ಅರ್ಪಿಸುವರು. ಇಂದಿಗೂ ಹುಲಗಿಯಲ್ಲಿ ನಾಗಜೋಗತಿ, ಬಸವ ಜೋಗಿಯರು **'ಮಾತಂಗಿ ನಿನ್ನಾಳ್ಮುದೋ'** ಎಂದು ಹಾಡಿ ಹೊಗಳುತ್ತಿರುವದು ಊಹಿಸಿದರೆ ಕುಮಾರರಾಮನ ಅಂತ್ಯಕ್ಕೆ ಕಾರಣಳಾದ ಮಾತಂಗಿ ಹುಲಿಗಿಯಾಗಿದ್ದಾಳೆಂದು ಊಹಿಸಬಹುದಾಗಿದೆ. ಇದು ಅಧ್ಯಯನಕ್ಕೆ ಒಳಪಡಬೇಕಾದ ವಿಷಯವಾಗಿದೆ.

ಕಮ್ಮಟ ದುರ್ಗವು ಮುಂದೆ ವಿಜಯನಗರ ಸ್ಥಾಪನೆಗೆ ತಳಹದಿ ಯಾಯಿತು. ಹರಿಹರ ಬುಕ್ಕರಾಯರು ಇವರ ಸೇನೆಯಲ್ಲಿ ಕೋಶಾಧಿಕಾರಿ ಗಳಾಗಿದ್ದು ಮುಂದೆ ಅವರು ಕುಮಾರರಾಮನ ಪತನಾನಂತರ ವಿಜಯ ನಗರ ಸ್ಥಾಪನೆಗೆ ಕಾರಣರಾದರು. ವೀರ ಪರಂಪರೆಯಿಂದು ಪಕ್ಕದಲ್ಲಿಯೇ ಕುರುಹುಗಳು ಇದ್ದು ಬಾಳಿ ಹೋದುದರ ಬಗ್ಗೆ ಇಂದಿಗೂ ಅವಶೇಷಗಳಿವೆ. ವೀರಮರಣವನ್ನಪ್ಪಿದ ನಂತರ ದೈವತ್ವಕ್ಕೆ ಏರಿದ ಕುಮಾರರಾಮನ ರುಂಡದ ಪ್ರತಿರೂಪವನ್ನು ಆಶ್ವಾರೂಢ ಭರ್ಚಿ ಹಿಡಿದು ಹೋರಾಡುವ ಪ್ರತಿಮೆಯನ್ನು ಬಳ್ಳಾರಿ ಹತ್ತಿರದ ಬಟ್ಟರ ಹಳ್ಳಿ ಲಕ್ಷ್ಮಿಪುರ, ಸಂಡೂರು, ಕಾಕಬಾಳು, ಕಮ್ಮಟ ದುರ್ಗ, ಮುಕ್ಕುಂಪಿ, ಕುಂದರಗಿ, ಚಿತ್ರದುರ್ಗ, ಮೊಳಕಾಲ್ಮೂರಿನ ರಾಮಪುರ, ಹಾವೇರಿಯ ಕುಳೆನೂರು, ಮಾಟೂರು, ಮಲ್ಲಂದ್ರ, ಸಿರೂಡ, ಶಂಕ್ರೇಕೊಪ್ಪ, ತುಮಕೂರು ಜಿಲ್ಲೆಯ ದೊಡ್ಡ ಪಾಲನ ಹಳ್ಳಿ, ಬೇಡಕರ್ಣಿಗಳಲ್ಲಿ ಇಂದಿಗೂ ಪೂಜಿಸುತ್ತಾರೆ.

ಕುಮಾರರಾಮ ಶೂರನಾಗಿದ್ದು ಇತನ ಕಲಿತನ ಬಲಿದಾನದಿಂದ ಮಹಾನ್ ವಿಜಯನಗರ ಸಾಮ್ರಾಜ್ಯದ ಉದಯಕ್ಕೆ ಕಾರಣವಾಗಿದೆ ನಂಜುಂಡ ಕವಿಯು **ರಾಮನಾಥ ಚರಿತ**ದಲ್ಲಿ ಕುಮಾರರಾಮನನ್ನು ಅರ್ಜುನ ಅವತಾರವೆಂದು ವರ್ಣಿಸಲಾಗಿದೆ. ಕಮ್ಮಟ ದುರ್ಗದಲ್ಲಿ ೫ ಶಾಸನಗಳು ಇದ್ದು ಈತನನ್ನು ಪರನಾರಿ ಸಹೋದರನಾಗಿಯೇ ಚಿರಸ್ಥಾಯಿಯಾಗಿ ಉಳಿದ **ಕುಮಾರ ರಾಮ** ಎಂದು ಇತಿಹಾಸದಲ್ಲಿ ವರ್ಣಿಸಲಾಗಿದೆ. ತನ್ನದೇ ಆದ ವ್ಯಕ್ತಿತ್ವವನ್ನು ಹೊಂದಿದ್ದು ಈ ರಾಜ್ಯದ ಹರಿಯಲಾದೇವಿ ಕಂಪಿಲರಾಯ, ಮುಮ್ಮಡಿ ಸಿಂಘನಾಯಕ, ಅಜಿಮಾದ ನಾಯಕಿ, ಮಂತ್ರಿ ಬೈಚಪ್ಪ ನಾಯಕ. ರತ್ನಾಜಿ. ಈ ರಾಜ್ಯ ಪ್ರಮುಖರು.

ಇಲ್ಲಿ ಜಿನಗಾರರ ಗುಡಿಗಳೆಂದು ಕರೆಸಿಕೊಳ್ಳುವ ಜೈನರ ಬಸದಿಗಳಿದ್ದು ಇಂದಿಗೂ ಜಿನಮೂರ್ತಿ ಏಕಾಂಗಿಯಾಗಿ ನಿಂತಿವೆ. ಈ ದೇವಾಲಯ ಅಕ್ಕಪಕ್ಕದಲ್ಲಿ 2 ದೇಗುಲಗಳಿದ್ದು ಮೂರ್ತಿಗಳಿಲ್ಲ. ಹೆಸರಿಗೆ ತಕ್ಕಂತೆ ಅಖಂಡ ಗುಮ್ಮಟದಿಂದ ಬಲಿಷ್ಠ ರಾಜ್ಯವಾದ ಇದು ಎತ್ತರ ಸ್ಥಾನದಲ್ಲಿದೆ.

**ಕಿನ್ನಾಳದ ಕರಕುಶಲ ಕಲೆಗಳು**

**ದೂರ ;**

ತಾಲೂಕಿನಿಂದ :೧೧ ಕಿ.ಮೀ.

ಜಿಲ್ಲೆಯಿಂದ : ೧೧ ಕಿ.ಮೀ.




ವಿಜಯನಗರ ಹಾಗೂ ಮೈಸೂರು ಅರಸರ ಆಳ್ವಿಕೆಯಲ್ಲಿ ರಾಜಾಶ್ರಯ ಪಡೆದನಂತರ ಈ ಭಾಗದ ಪ್ರದೇಶ ಸಾಲಾರ್ ಜಂಗ್. ನವಾಬನ ಆಡಳಿತಕ್ಕೆ ಒಳಪಟ್ಟ ತರುವಾಯವೂ ಕಲೆಗಳನ್ನು ಪೋಷಿಸುತ್ತಾ ಬರಲಾಗಿದೆ ಸಾಂಪ್ರದಾಯಿಕ ಕರಕುಶಲ ಕಲೆಗಳು ವಿಜಯನಗರ ಅರಸರ ಕಾಲದಲ್ಲಿ ಉಚ್ರಾಯ ಸ್ಥಿತಿಯಲ್ಲಿತ್ತು ವಿಜಯ ನಗರ ಸಾಮ್ರಾಜ್ಯದ ಪತನದ ನಂತರ ಕಲಾಕಾರರು ಹೊಟ್ಟೆ ಪಾಡಿಗಾಗಿ ಕನಕಗಿರಿ ಮತ್ತು ಕಿನ್ನಾಳಗೆ ಬಂದು ನೆಲೆ ನಿಂತು ಕಲೆಯನ್ನು ಮುಂದುವರೆಸಿದರು. ಹಂಪಿಯ ವಿರುಪಾಕ್ಷ ಮಂದಿರದಲ್ಲಿ ಚಿತ್ರಿಸಿರುವ ಚಿತ್ರಕಲೆಯು ಕಿನ್ನಾಳ ಚಿತ್ರಗಾರರ ಚಿತ್ರಕಲೆ ಎಂದು ಸಂಶೋಧನೆಗಾರರ ಅಭಿಪ್ರಾಯವಾಗಿದೆ. ೮೫ ಸಾವಿರ ಜನ ಸಂಖ್ಯೆ ಇರುವ ಈ ಗ್ರಾಮ ಕೊಪ್ಪಳದಿಂದ ಸು,೧೧ ಕಿ. ಮೀ ದೂರದಲ್ಲಿದೆ ಈ ಗ್ರಾಮ ರಾಜ್ಯ ರಾಷ್ಟದಲ್ಲಿ ಮತ್ತು ವಿದೇಶಗಳಲ್ಲಿ ಕೂಡಾ ಮನ್ನಣೆಯನ್ನು ಗಳಿಸಿದೆ. ಕಟ್ಟಿಗೆಗಳಿಂದ ಗೊಂಬೆ ಚೌಕಿಗಳನ್ನು ತಯಾರಿಸಿ ಚಿತ್ರಗಳನ್ನು ಬರೆದು ತಾವೆ ತಯಾರಿಸಿದ ಬಣ್ಣ ಹಚ್ಚುವದರಲ್ಲಿ ಇವರು ನಿಪುಣರು. ಹತ್ತು ಇಪ್ಪತ್ತೈದು ಮನೆಗಳ ಚಿತ್ರಗಾರರ ವಂಶಗಳು ಇರುವ ಕುಟುಂಬಗಳಿದ್ದು ಕಿತ್ತು ತಿನ್ನುವ ಬಡತನ ಬಂದರೂ ಕಲೆಯನ್ನು ಮುಂದುವರೆಸಿಕೊಂಡು ಬಂದಿರುವದು ಶ್ಲಾಘನೀಯವಾಗಿದೆ.ಇವರು ವಿಶೇಷವಾಗಿ ಶಿವ, ಪಾರ್ವತಿ, ಗಣ ಪತಿ ರುದ್ರ ವೀರಭದ್ರ, ನಂದಿ, ಆಕಳು, ಹುಲಿ, ಸಿಂಹ, ಒಂಟೆ, ಆನೆ, ನರಿ, ಬೆಕ್ಕು, ಮೊಲ, ಬಸವಣ್ಣ ಕುದುರೆ, ಗಿಳಿ, ಗುಬ್ಬಿ ಕೋಗಿಲೆ ನವಿಲು, ಹಕ್ಕಿ ಮುಂತಾದ ಪ್ರಕೃತಿ ಸೊಬಗಿನ ವಸ್ತುಗಳನ್ನೆ ಇವರು ಸೃಷ್ಟಿಸುತ್ತಾರೆ ಗೌರಿ ಹುಣ್ಣಿಮೆಯಲ್ಲಿ ನಂದಿ ಗೌರಿ ಗಜಗೌರಿ, ಕೀಲ ಗೌರಿ ದುರ್ಗಾದೇವಿ ದೇವತೆಗಳು. ಆಂದ್ರ ಪ್ರದೇಶಗಳಿಗೆ ರವಾನೆಯಾಗುತ್ತವೆ ವಿಶೇಷವಾಗಿ ಇವರು ಚೌಕಿಗಳು ಷಟ್ಬುಜದಿಂದ ಅಷ್ಟಭುಜದವರೆಗೂ ವೃತ್ತಾಕಾರದಲ್ಲೂ ನಕ್ಷತ್ರಾಕಾರ ದಲ್ಲೂ ತಯಾರಿಸುವರು. ಕಟ್ಟಿಗೆಯಲ್ಲೆ ಇಡೀ ಪ್ರಕೃತಿಯನ್ನೆ ಸೆರೆ ಹಿಡಿದು ಬ್ರಹ್ಮಸೃಷ್ಟಿಯ ಕಲೆಯನ್ನು ಈ ನಾಡಿಗೆ ನೀಡಿರುವ ಅದ್ಬುತ ಕಲಾ ಪರಂಪರೆ ಕಿನ್ನಾಳದಲ್ಲಿದೆ.

**ತುಂಗಭದ್ರಾ ನದಿ ಯೋಜನೆ, ಪಂಪಾವನ**

**ದೂರ ;**

ತಾಲೂಕಿನಿಂದ : ೨೦ ಕಿ.ಮೀ.

ಜಿಲ್ಲೆಯಿಂದ : ೨೦೧ ಕಿ.ಮೀ



ಸ್ಥಾಪನೆ : ೧೯೫೨

ಸ್ಥಳ : ಕೊಪ್ಪಳ ಜಿಲ್ಲೆಯ ಮುನಿರಾಬಾದ(ಮಲ್ಲಾಪುರ)ದಲ್ಲಿ ತುಂಗಭದ್ರಾ ನದಿಗೆ ಆಣೆಕಟ್ಟು ಕಟ್ಟಲಾಗಿದೆ.

ಉದ್ದೇಶ : ತುಂಗಭದ್ರಾ ನದಿ ಯೋಜನೆಯ ಮುಖ್ಯ ಉದ್ದೇಶವೇನೆಂದರೆ ನೀರಾವರಿ ಮತ್ತು ಜಲ ವಿದ್ಯುಚ್ಛಕ್ತಿ ಉತ್ಪಾದನೆ.

**ಉಪಯೋಗ / ಸೌಲಭ್ಯಗಳು :**

ಇದು ಕರ್ನಾಟಕ ಮತ್ತು ಆಂಧ್ರ ಪ್ರದೇಶದ ೫.೫ ಲಕ್ಷ ಹೆಕ್ಟರ್ ಭೂಮಿಗೆ ನೀರಾವರಿ ಮತ್ತು ವಿದ್ಯುಚ್ಛಕ್ತಿಯನ್ನು ಒದಗಿಸುತ್ತದೆ.

**ತುಂಗಭದ್ರಾ ನದಿಯ ಯೋಜನೆಯ ಎಡದಂಡೆ ಕಾಲುವೆ:**

ಸುಮಾರು ೨೨೭ ಕಿ.ಮೀ. ಉದ್ದವನ್ನು ಹೊಂದಿದೆ. ಇದರಿಂದ ನೀರಾವರಿ ಕ್ಷೇತ್ರಕ್ಕೆ ಬಹಳ ಅನುಕೂಲವಾಗಿದೆ. ಈ ಪ್ರದೇಶದಲ್ಲಿ ಬೆಳೆಯುವ ಪ್ರಮುಖ ಬೆಳೆಗಳೆಂದರೆ ಭತ್ತ, ತೋಟಗಾರಿಕೆ, ಖಾರೀಪ್ ಮುಂಗಾರಿ, ಹತ್ತಿ ಮುಂತಾದವು. ಈ ನೀರಾವರಿಯು ಸುಮಾರು ಒಟ್ಟು ೨,೪೩,೯೦೦:೧೯ ಹೆಕ್ಟೇರು ಪ್ರದೇಶಕ್ಕೆ ನೀರನ್ನು ಒದಗಿಸುತ್ತದೆ.

ತುಂಗಭದ್ರಾ ಆಣೆಕಟ್ಟಿನ ಪಕ್ಕದಲ್ಲಿ ಸುಂದರವಾದ ಈಜು ಕೊಳವನ್ನು ನಿರ್ಮಿಸಲಾಗಿದೆ. ಮತ್ತು ಅಶೋಕ ವನ, ಕೈಲಾಸ ಮಂಟಪ, ಸುತ್ತ-ಮುತ್ತ ಇನ್ನು ಮುಂತಾದ ಪ್ರವಾಸಿ ತಾಣಗಳಿವೆ.

**ಪಂಪಾವನ**

**ದೂರ ;**
ತಾಲೂಕಿನಿಂದ : ೨೦ ಕಿ.ಮೀ.
ಜಿಲ್ಲೆಯಿಂದ : ೨೦ ಕಿ.ಮೀ



- ಉದ್ಯಾನವನದ ಹೆಸರು : ಪಂಪಾವನ, ಮುನಿರಾಬಾದ.
- ತಾಲೂಕು ಮತ್ತು ಜಿಲ್ಲೆ : ಕೊಪ್ಪಳ
- ಸ್ಥಾಪನೆಯಾದ ವರ್ಷ : ೧೯೭೧

- ಭೌಗೋಳಿಕ ಲಕ್ಷಣಗಳು : ತಗ್ಗು ದಿನ್ನೆಗಳಿಂದ, ಕಲ್ಲು ಗುಡ್ಡಗಳಿಂದ ಕೂಡಿದ ಜಂಬಿಟ್ಟಗೆ ಮಣ್ಣು
- ಒಟ್ಟು ವಿಸ್ತೀರ್ಣ : ೬೬ ಎಕರೆ
- ಅಭಿವೃದ್ಧಿ ಹೊಂದಿದ ವಿಸ್ತೀರ್ಣ: ೩೦ ಎಕರೆ
- ಸಸ್ಯ ಸಂಪತ್ತು : ೧೦೦ ಜಾತಿಯ ಮರಗಳು, ೧೦೦-೧೫೦ ಜಾತಿಯ ಪೊದೆಗಳು ೨೦೦-೨೫೦ ಜಾತಿಯ ಅಲಂಕಾರಿಕ ಗಿಡಗಳು & ಹುಲ್ಲು ಹಾಸು ಇತ್ಯಾದಿ.
- **ನೀರಿನ ಸೌಕರ್ಯಗಳು**
- ಉದ್ಯಾನವನಕ್ಕೆ ಡ್ಯಾಂನಿಂದ ಬರುವ ಬಸಿನೀರು ಸರೋವರದಲ್ಲಿ ತುಂಬಿ ಈ ನೀರು ಮುಖ್ಯ ನೀರಿನ ಮೂಲವಾಗಿದೆ.
- ೫ ಎಚ್.ಪಿ ಬೋರವೆಲ್‌ಗಳು.
- ಹುಲ್ಲು ಹಾಸುಗಳಿಗೆ ಸ್ಪ್ರಿಂಕ್ಲರ ಮೂಲಕ ನೀರಾವರಿ ಮಾಡಲಾಗುತ್ತಿದೆ.
- **ಉದ್ಯಾನವನದ ಪರಿಮಿತಿ**

ಪೂರ್ವಕ್ಕೆ : ಹೊಸಪೇಟೆ ಕೊಪ್ಪಳ ರಸ್ತೆ

ಪಶ್ಚಿಮಕ್ಕೆ : ತುಂಗಭದ್ರಾ ಡ್ಯಾಂ

ಉತ್ತರಕ್ಕೆ : ಇಂದ್ರಭವನಕ್ಕೆ ಹೋಗುವ ರಸ್ತೆ

ದಕ್ಷಿಣಕ್ಕೆ : ನೀರಾವರಿ ಇಲಾಖೆಯ ಕಛೇರಿಗಳಿಗೆ ಹೋಗುವ ರಸ್ತೆ

**ಭೋರೂಕಾ ವಿದ್ಯುತ್ ನಿಗಮ ನಿಯಮಿತ**

**ದೂರ ;**
ತಾಲೂಕಿನಿಂದ : ೨೭ ಕಿ.ಮೀ.
ಜಿಲ್ಲೆಯಿಂದ : ೨೭ ಕಿ.ಮೀ




೧993 ರಲ್ಲಿ ಸ್ಥಾಪನೆಗೊಂಡಿರುವ **ಭೋರೂಕಾ ವಿದ್ಯುತ್ ನಿಗಮ ನಿಯಮಿತ** ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುತ್ತದೆ. ಇಲ್ಲಿನ ವಿದ್ಯುತ್ ಮುನಿರಾಬಾದ್‌ಗೆ ವಿತರಣೆಯಾಗುತ್ತದೆ. ತುಂಗಭದ್ರ ನದಿ ಕಾಲುವೆಗೆ ಅಡ್ಡಲಾಗಿ ಕಟ್ಟಲಾಗಿರುವ ವಿದ್ಯುತ್ ಉತ್ಪಾದನಾ ಕೇಂದ್ರ ಬಂಡಿ ಹರ್ಲಾಪೂರದ ಹತ್ತಿರ ಸಿಗುತ್ತದೆ. ಪ್ರಶಾಂತ ವಾತಾವರಣವಿದ್ದು ಮುಂದೆ ಸಾಣಾಪುರದಲ್ಲಿ ಸರಕಾರಿ ಪ್ರವಾಸಿ ಮಂದಿರ ತುಂಗಭದ್ರಾ ನದಿಯ ಮೇಲೆ ಇದ್ದು ಮಕ್ಕಳು ಉಪಹಾರಕ್ಕಾಗಿ ವಿಶ್ರಮಿಸಲು ಅವಕಾಶವಿದೆ.

**ಕೈಗಾರಿಕೆಗಳು**

**ದೂರ ;**

ತಾಲೂಕಿನಿಂದ : ೧೪ ಕಿ.ಮೀ.

ಜಿಲ್ಲೆಯಿಂದ : ೧೪ ಕಿ.ಮೀ



ಕೊಪ್ಪಳದಿಂದ ಹೊಸಪೇಟೆ ಮಾರ್ಗದುದ್ದಕ್ಕೂ ಕೈಗಾರಿಕಾ ಕೇಂದ್ರಗಳು ಬೆಳೆದಿದ್ದು ಇವು ರಾಷ್ಟ್ರಮಟ್ಟದ ಮನ್ನಣೆಯನ್ನು ಪಡೆದಿವೆ. ಕೊಪ್ಪಳ ಜಿಲ್ಲೆಯ ಜನತೆಗೆ ಉದ್ಯೋಗ ನೀಡಿದ್ದಲ್ಲದೇ ರಷ್ಯಾ, ಚೀನಾ, ಜಪಾನ, ಜರ್ಮನಿ ದೇಶಗಳಿಗೆ ಸರಕುಗಳನ್ನು ರಫ್ತು ಮಾಡುವರು. ಈ ಕಾರ್ಖಾನೆಯಲ್ಲಿ ತಯಾರಾಗುವ ವಸ್ತುಗಳೆಂದರೆ ಹೆಚ್ಚಾಗಿ ಕಬ್ಬಿಣ, ಉಕ್ಕಿನ ಸಾಮಾನುಗಳು. ಇಂತಹ ಕೈಗಾರಿಕೆಗಳಲ್ಲಿ ಹೆಚ್ಚು ಕಾರ್ಮಿಕರು ಕೆಲಸ ಮಾಡುತ್ತಿದ್ದು, ಈ ಕಾರ್ಮಿಕರಿಗೆ ಹಲವಾರು ಸೌಲಭ್ಯಗಳನ್ನು ಕಂಪನಿಗಳು ಒದಗಿಸಿದೆ. ಪ್ರಮುಖವಾಗಿ ಕಲ್ಯಾಣಿ, ಎಸ್.ಎಸ್.ಪಿ.ಎಲ್. ಬಿರ್ಲಾ, ಬೆಲ್ಡೊಟಾ, ಕೊಕಾ-ಕೊಲಾ ಮುಂತಾದವುಗಳು.

ಉದಾಹರಣೆಗೆ ಕಿರ್ಲೋಸ್ಕರ ಕಂಪನಿಯ 1920 ರಲ್ಲಿ ಲಕ್ಷ್ಮಣರಾವ್‌ರವರು ಸ್ಥಾಪನೆ ಮಾಡಿದರು. ದೇಶದ ಆರ್ಥಿಕ ಅಭಿವೃದ್ಧಿಗಾಗಿ ತಮ್ಮ ಸೇವೆಯನ್ನು ಸಲ್ಲಿಸಲು ಉತ್ಪನ್ನ ಪೂರಕವಾದ ಕೆಲಸವನ್ನು ಕೈಗೊಂಡರು ಹಲವು ಕಂಪನಿಗಳು ಹಾಗೂ ಸಂಸ್ಥೆಗಳು ಅವರಿಗೆ ಗೌರವವನ್ನು ಅರ್ಪಿಸಿದವು ಭಾರತದಲ್ಲಿ ಇಂಜನಿಯರಿಂಗ್ ಉತ್ಪಾದನೆಯಲ್ಲಿ ಅಸಮಾನ್ಯವಾದ ಕೊಡುಗೆಯನ್ನು ನೀಡಿದ್ದಕ್ಕಾಗಿ 1968 ರಲ್ಲಿ ಸರ್ ವಾಲಟರ್ ಫ್ರೈಜ್ ದೊರೆಯಿತು. ಅಲ್ಲದೆ ಭಾರತ ಸರಕಾರವು 1965 ರಲ್ಲಿ ಪದ್ಮಭೂಷಣ ಪದವಿಯನ್ನು ನೀಡಿಗೌರವಿಸಿದೆ. ಭಾರತದ ರಾಷ್ಟ್ರಪತಿಗಳಾದ ಎ.ಪಿ.ಜೆ.ಅಬ್ದುಲ್ ಕಲಾಂ ಅವರು ಎಸ್.ಎಲ್.ಕೆ. ಅವರ ಜನ್ಮ ಶತಮಾನೋತ್ಸವದ ನಿಮಿತ್ಯ 28 ಮೇ 2003 ರಂದು ಪುಣೆಯಲ್ಲಿ ಕಿರ್ಲೋಸ್ಕರ ಗುಂಪಿನ ಕಲ್ಪ ಕಲೆಯ 3 ಹೊಸ ಔದ್ಯಮಿಕ ಉತ್ಪನಗಳನ್ನು ದೇಶಕ್ಕೆ ಸಮರ್ಪಿಸಿದರು. ಈ ಉತ್ಪನಗಳೆಂದರೆ 1) ಎಸ್.ಎ.ಟಿ. 650 2) ಸೆಂಟ್ರಿ ಫ್ಯೂಗಲ್ ವಿಶೇಷ ಮಾದರಿಯ ಪಂಪು 3) ಕಿಲೋಸ್ಕರ ಗ್ರೀನ್ ಎಂಬ ಪರಿಸರ ಸ್ನೇಹಿತ ಜನರೇಟರ್ ಹೆಚ್ಚು ಪ್ರಚಲಿತ.

**ಹಿರೇಹಳ್ಳ ನೀರಾವರಿ ಯೋಜನೆ**

**ದೂರ ;**

ತಾಲೂಕಿನಿಂದ : ೧೩ ಕಿ.ಮೀ.

ಜಿಲ್ಲೆಯಿಂದ : ೧೩ ಕಿ.ಮೀ.

ವೀರಾಪೂರ ಮತ್ತು ಹಿರೇಹ ನಡುವೆ ೩.೬ ಕಿ.ಮಿ ವಿಸ್ತಾರವಿರುವ ೧೫ ಮೀ ಎತ್ತರವಿರುವ ಇದರ ಸಾಮರ್ಥ್ಯ ೪೨.೨೩ ಇದ್ದು ೨೦೫೮೩ ಎಕ್ಕರೆ ಜಮೀನಿಗೆ ನೀರುಣಿಸುತ್ತಿದೆ ೨೩.೩೦ ಕಿಮಿ ಉದ್ದದ ಎಡ ದಂಡೆ ೨೩ ಕಿ.ಮೀ ಉದ್ದದ ಬಲದಂಡೆ ಕಾಲುವೆ

ಅರಕೇರಿ, ಮುದ್ಲಾಪೂರ, ಕಿನ್ನಾಳ, ದೇವಲಾಪೂರ,  ಚಿಲವಾಡಗಿ, ಓಜನಹಳ್ಳಿ, ಕೊಪ್ಪಳ, ಬಹದ್ದೂರ ಬಂಡಿ, ಹೂವಿನಹಾಳ, ಹೊಸಳ್ಳಿ. ಮುದ್ದಾಬಳ್ಳಿ ಗೊಂಡಬಾಳ. ಹಂದ್ರಾಳ, ಹಲಿಗೇರಿ ಇತರ ೨೮ ಹಳ್ಳಿಗಳಿಗೆ ನೀರುಣಿಸುತ್ತಿದೆ.

**ಜಿಲ್ಲಾಡಳಿತ ಭವನ**



ಕೊಪ್ಪಳ ಜಿಲ್ಲೆ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಪ್ರಾರಂಭ ಮಾಡಿ 11 ವರ್ಷ ಗತಿಸಿದೆ. ಜಿಲ್ಲಾಡಳಿತ ನಿರ್ವಹಣೆಗಾಗಿ ಜಿಲ್ಲಾಡಳಿತ ಭವನವನ್ನು ನಿರ್ಮಾಣಗೊಂಡಿದ್ದು, ಇದರಲ್ಲಿ ಜಿಲ್ಲಾಪಂಚಾಯತ್, ಜಿಲ್ಲಾಧಿಕಾರಿಗಳ ಕಛೇರಿಗಳನ್ನೊಳಗೊಂಡ ಅನೇಕ ಇಲಾಖೆಗಳು ಕಾರ್ಯನಿರ್ವಹಿಸುತ್ತಿದ್ದು, ಈ ಕಟ್ಟಡದ ಸುತ್ತಲು ವನ ನಿರ್ಮಾಣಗೊಂಡಿದ್ದು ನೋಡುಗರಿಗೆ ಆನಂದವನ್ನುಂಟು ಮಾಡುತ್ತದೆ.

# ಗಂಗಾವತಿ ತಾಲೂಕಿನ ಪ್ರೇಕ್ಷಣೀಯ ಸ್ಥಳಗಳು

**ಹಿರೇಬೆಣಕಲ್ ನಗಾರಿ ಬೆಟ್ಟ**

**ದೂರ ;**
ತಾಲೂಕಿನಿಂದ : ೧೯ ಕಿ.ಮೀ.
ಜಿಲ್ಲೆಯಿಂದ : ೧೯ ಕಿ.ಮೀ

ಹೈದರಾಬಾದ ಕರ್ನಾಟಕ ಪ್ರದೇಶದ 7 ಅದ್ಭುತಗಳಲ್ಲಿ ಗಂಗಾವತಿ ತಾಲೂಕಿನ ಹಿರೆಬೆಣಕಲ್ ಕೂಡಾ ಒಂದಾಗಿದೆ. ಸರಕಾರದ ಸರ್ವೇಕ್ಷಣಾ ಇಲಾಖೆಯು ವಿಶ್ವಪರಂಪರೆಯ ಪ್ರೇಕ್ಷಣೀಯ ಸ್ಥಳಗಳಲ್ಲಿ ಹಿರೇಬೆಣಕ ಗ್ರಾಮವನ್ನು ಗುರುತಿಸಿದೆ. ಗ್ರಾಮದ ಹತ್ತಿರ ಸುಮಾರು 10 ಸಾವಿರ ಹೆಕ್ಟೇರುಗಳಲ್ಲಿ ಹಬ್ಬಿಕೊಂಡಿರುವ ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ ಆನೆಗುಂದಿಗೆ ಹತ್ತಿರದಲ್ಲಿರುವ ಬೆಟ್ಟದ ತುದಿಯಲ್ಲಿ ಸುಮಾರು **3000 ವರ್ಷಗಳಷ್ಟು ಹಳೆಯದಾದ ಆದಿಮಾನವರ ನಿವೇಶನಗಳಿವೆ** ಒಂದು ಭಾಗದಲ್ಲಿ ತುಂಗಭದ್ರಾ ಜಲಾಯಶಯದ ಬಲದಂಡೆ ಕಾಲುವೆ ಹರಿಯುತ್ತಿದ್ದು, ಇನ್ನೊಂದು ಭಾಗದಲ್ಲಿ ಬೆಟ್ಟಗಳಿಂದ ಆವೃತ್ತವಾಗಿರುವ ಭೂಭಾಗ, ಭತ್ತದ ಗದ್ದೆಗಳಿಂದ ಹಾಗೂ ತೆಂಗಿನ ತೋಪುಗಳಿಂದ ಹರಡಿಕೊಂಡಿದೆ. ಈ ನೆಲೆಗಳಿಗೆ **ಶಿಲಾಸಮಾ** ಗಳೆಂದು ಕರೆಯುತ್ತಾರೆ. ಆದರೆ ಸ್ಥಳೀಯವಾಗಿ ಇದಕ್ಕೆ **ಮೊರೆರ ಮನೆಗಳೆಂದು ಮತ್ತು ಅಲ್ಲಿರುವ ಬೆಟ್ಟಕ್ಕೆ ನಗಾರಿ ಗುಡ್ಡ**ವೆಂದು ಕರೆಯುವುದುಂಟು.



**ಇದರಲ್ಲಿ ಆಶ್ಚರ್ಯಕರ ಸಂಗತಿ ಎಂದರೆ ನಮ್ಮ ಪೂರ್ವಿಕರು ದೊಡ್ಡ ಬಂಡೆಗಲ್ಲುಗಳನ್ನು ಕೊರೆದು 10×10 ಅಳತೆಯ ಕಲ್ಲುಗಳನ್ನು ಯಾವುದೇ ರೀತಿಯ ಭಾರ ಎತ್ತುವ ಯಂತ್ರಗಳ ಸಹಾಯವಿಲ್ಲದೆ ಜೋಡಿಸಿ ವಾಸಸ್ಥಾನ ನಿರ್ಮಾಣ ಮಾಡಿದ್ದು ಅವರ ತಂತ್ರಜ್ಞಾನಕ್ಕೆ ಸಾಕ್ಷಿಯಾಗಿದೆ.** ಇವತ್ತಿನ ವೈಜ್ಞಾನಿಕ ಉಪಕರಣಗಳನ್ನು ಬಳಸಿಯೂ ನಮ್ಮ ಕಟ್ಟಡಗಳು ನೂರು ವರ್ಷ ಉಳಿಯುವದು ಕಷ್ಟವಿದೆ. ಅಲ್ಲಿನ ಬಂಡೆಗಲ್ಲಿನ ಮೇಲೆ ಸಿಕ್ಕಿರುವ ಸಂಗೀತ ವಿವರಗಳು ಮತ್ತು ಅವುಗಳಿಂದ **"ನಗಾರಿ"** ಎಂಬ ವಾದ್ಯದ ಕಲ್ಪನೆ ನಿಜವಾಗಿಯೂ ಅದ್ಭುತವಾಗಿದೆ.



೧೨ ಗುಹೆಗಳಲ್ಲಿ ಚಿತ್ರಿಸಲಾದ ಬಂಡೆ ಮೇಲಿನ ಗುಹಾ ಚಿತ್ರಗಳನ್ನು 1968 ರಲ್ಲಿ ಲಿಯೋನಾರ್ಡ್‌ಮನ್ ಮತ್ತು ಡಾ. ಅ. ಸುಂದರ ಇವರು ಸಂಶೋಧಿಸಿ ಲೇಖನಗಳನ್ನು ಬರೆದಿರುತ್ತಾರೆ. ಅದೇ ರೀತಿ ಚಿಕ್ಕ ಬೆಣಕಲ್‌ನ ಅನತಿ ದೂರದಲ್ಲಿರುವ ಬೆಟ್ಟದಮೇಲೆ ಸುಮಾರು 3 ಕಿ.ಮೀ. ಸಾಗಿದ ನಂತರ ಸಿಗುವ ಪ್ರಾಚೀನ ಕಾಲದ ಜನ ವಾಸಿಸುರುವ ಚಿಕ್ಕ ಚಿಕ್ಕ ವಾಸಸ್ಥಾನದ ಮನೆಗಳನ್ನು ಕಾಣಬಹುದು. ಇಲ್ಲಿನ ಜನ ಇವುಗಳನ್ನು "ಮೋರೆರ್ ಮನೆಗಳು" ಎಂದು ಕರೆಯತ್ತಾರೆ. ಮೌರ್ಯರ ಕಾಲದ ಗಿಡ್ಡಗಿನ ಜನರ ವಾಸಸ್ಥಾನವಾಗಿರಬಹುದೆಂದು ಊಹಿಸಲಾಗಿದೆ. ಈ ವಿಶಾಲ ಮೈದಾನದ ಹತ್ತಿರದ ಬಂಡೆಯ ಮೇಲೆ ಹಿಂದೆ ಒಂದು ನಾಗರಿಕತೆ ಇಲ್ಲಿ ಊರು ಕಟ್ಟಿಕೊಂಡು ಬಾಳಿತ್ತು ಎಂಬುದು ಸ್ಪಷ್ಟ ಕುರುಹುಗಳು ಸಿಗುತ್ತವೆ. ಬಂಡೆಗಳಿಂದ ನಿರ್ಮಿಸಿ ಕೊಂಡಿರುವ ಚಿಕ್ಕ ಚಿಕ್ಕ ಮನೆಗಳು ಗುಂಪಾಗಿರುವ ಇಲ್ಲಿ ನಾವು ಊರನ್ನೆ ಕಾಣಬಹುದು. ಈ ಊರಿನ ಪಕ್ಕದಲ್ಲಿ ವಿಶಾಲವಾದ ಹೊಂಡವಿದೆ. ಬಹಳಷ್ಟು ಮನೆಗಳು ನಿರ್ಲಕ್ಷದಿಂದ ಹಾಳಾಗಿದ್ದು ಈ ಊರಿನ ಸುತ್ತ ಗೋಡೆಯನ್ನು ನಿರ್ಮಿಸಲಾಗಿದೆ. ಅಲ್ಲಿಂದ ನಾವು ಪಶ್ಚಿಮಕ್ಕೆ ಇಳಿದರೆ ಶಿವರಾಯಪ್ಪನ ಕೆರೆ ಸಿಗುತ್ತದೆ. ಇದು ಕೆರೆ ಅನ್ನುವದಕ್ಕಿಂತ ಹಿಂದಿನ ಕಾಲದ ಜನರ ಡ್ಯಾಂ ಎಂದು ಕರೆಯಬಹುದು. ಇದರೊಳಗಿನ ತೂಗು ಗೇಟ್‌ನ್ನು ಬೃಹತ್ತಾದ ಏಕಶಿಲೆಗಳಿಂದ ಮಂಟಪವನ್ನು ನಿಲ್ಲಿಸಿ ನಿರ್ಮಿಸಲಾಗಿದೆ. ಇಷ್ಟೊಂದು ಬೃಹತ್ ಕಂಬಗಳನ್ನು ಇಲ್ಲಿ ನಿಲ್ಲಿಸಿರುವದನ್ನು ಆಶ್ಚರ್ಯವನ್ನುಂಟು ಮಾಡುತ್ತದೆ. ಈ ಕ್ರಸ್ಟ್‌ಗೇಟ್ ಒಳಗಿಂದ ನೀರು ಹಾಯಿಸುವ ವ್ಯವಸ್ಥೆ ಇದ್ದು ಈ ಡ್ಯಾಂ ನ ಸುತ್ತಲೂ ಗುಡ್ಡವಿದೆ. ಈಗಲೂ ಇಲ್ಲಿ ದೊಡ್ಡ ಪ್ರಮಾಣದಲ್ಲಿ ನೀರನ್ನು ಸಂಗ್ರಹಿಸಿ ಇಡಬಹುದಾಗಿದೆ. ಇದನ್ನು ಸರಿಪಡಿಸಿದರೆ ಈಗಲೂ ಇದು ಬಳಕೆಗೆ ಬರುತ್ತದೆ.

**ಆನೆಗೊಂದಿ**

**ದೂರ ;**

ತಾಲೂಕಿನಿಂದ : ೧೩ ಕಿ.ಮೀ.

ಜಿಲ್ಲೆಯಿಂದ : ೬೫ ಕಿ.ಮೀ



ಆನೆಗೊಂದಿ, ವಿಜಯನಗರ ಸಾಮ್ರಾಜ್ಯದ ಮಾತೃಸ್ಥಾನವಾಗಿ ಚಾರಿತ್ರಿಕ ಮಹತ್ವ ಪಡೆದಿದೆ. ಇಲ್ಲಿ ಪುರಾಣ ಹಾಗೂ ಇತಿಹಾಸ ಕಾಲದ ಅಪೂರ್ವ ಸ್ಮಾರಕಗಳಿದ್ದು, ವಿಶಿಷ್ಟ ಚಾರಿತ್ರಿಕ ನೆಲೆ ಎನಿಸಿದೆ. ಸಾಹಿತ್ಯಿಕ ವಾಗಿಯೂ ಆನೆಗೊಂದಿ ಪ್ರಮುಖ ಸ್ಥಾನ ಪಡೆದಿತ್ತೆಂಬುದು ಅಲ್ಲಿಯ ಕಡೆಬಾಗಿಲಿನ ಬಳಿಯ ಹೊಲದಲ್ಲಿ ದೊರೆತ ತಾಮ್ರಶಾಸನದಿಂದ ತಿಳಿದುಬರುತ್ತದೆ. ಸಾಮಾನ್ಯವಾಗಿ ಶಾಸನಗಳಲ್ಲಿ ದಾನ, ದತ್ತಿಗೆ ಸಂಬಂಧಿಸಿದ ವಿಷಯಗಳಿರುತ್ತವೆ. ಆದರೆ ಈ ತಾಮ್ರಶಾಸನದಲ್ಲಿ ವಿವಾಹ ಪುರಾಣ ಹಾಗೂ ಅಮೃತ ಮಥನ ಪುರಾಣ ಗಳೆಂಬ ಎರಡು ಸಾಹಿತ್ಯಕೃತಿಗಳಿರುವುದು ವಿಶೇಷ.

ಆನೆಗೊಂದಿ ಪೌರಾಣಿಕ ಮಹತ್ವವುಳ್ಳ ಸ್ಥಳವೂ ಆಗಿದ್ದು, ಪಂಪಾದೇವಿ ಇಲ್ಲಿನ ತುಂಗಭದ್ರಾ ನದಿಯ ಉತ್ತರ ದಂಡೆಯ ಮೇಲೆ ತಪಸ್ಸು ಮಾಡಿ ಶಿವನನ್ನು ಮೆಚ್ಚಿಸಿ ಮದುವೆಯಾದಳು. ನಂತರ ಪಂಪಾದೇವಿ ಮತ್ತು ವಿರೂಪಾಕ್ಷ (ಶಿವ) ಹಂಪೆಯಲ್ಲಿ ನೆಲೆಸಿದರು. ಆನೆಗೊಂದಿಯ ಉತ್ತರಕ್ಕಿರುವ ಪಂಪಾದೇವಿ ತಪಸ್ಸು ಮಾಡಿದ ಸ್ಥಳವೆಂದು ಗುರುತಿಸಲಾಗುತ್ತದೆ. ಇದು ರಾಮಾಯಣ ಕಾಲದ ಕಿಷ್ಕಿಂದ ಪಟ್ಟಣವೆಂಬ ಪ್ರತೀತಿ ಇದೆ. ಆಂಜನೇಯ ಜನ್ಮಸ್ಥಳ ಅಂಜನಾದ್ರಿ ಇರುವುದು ಇಲ್ಲಿಯೇ 500 ವರ್ಷಗಳ ಸುದೀರ್ಘ ಅವಧಿಯವರೆಗೆ ಕಟ್ಟಿದ ಆನೆಗೊಂದಿ ಕೋಟೆ ಕಾಕತಿಯರಕಾಲದ್ದು ಎನ್ನಲಾಗಿದೆ. ಇಲ್ಲಿರುವ ಚಿಂತಾಮಣಿ, ಗಗನ್ ಮಹಲ್, ನವವೃಂದಾವನಗಳು, ರಂಗನಾಥಸ್ವಾಮಿ ದೇವಾಲಯ, ಪಂಪಾಸರೋವರ ಪ್ರೇಕ್ಷಣೀಯ ಸ್ಥಳಗಳಾಗಿವೆ.



ವಿಜಯ ನಗರ ಅರಸರ ಪ್ರಾರಂಬಿಕ ರಾಜಧಾನಿ ಯಾಗಿದೆ ಪೂರ್ವ ಅರಮನೆ ಇಲ್ಲಿದೆ ಆನೆಗುಂದಿಯ ಲಕ್ಷ್ಮೀ ನರಸಿಂಹ ದೇವಾಲಯ ಪೂರ್ವಾಭಿಮುಖವಾಗಿರುವ ದೇವಾಲಯವಾದ ಇದು ವಿಷ್ಣುಮೂರ್ತಿಯನ್ನು ಹೊಂದಿದೆ ನರಸಿಂಹ ಅವತಾರದ ಎರಡು ಶಿಲ್ಪಗಳು

ನಾಲ್ಕು ಕೈಗಳಿರುವ ಇದು ಚಕ್ರ ಶಂಖು ಹಿಡಿದಿರುವನು ಗರ್ಭಗುಡಿಯಲ್ಲಿ ಲಕ್ಷ್ಮೀ ನರಸಿಂಹನ ಸಹಿತ ೪ ಅಡಿ ಎತ್ತರದ ಶಿಲ್ಪವಿದ್ದು ತೊಡೆಮೇಲೆ ಲಕ್ಷ್ಮೀ ಕುಳಿತಿದ್ದಾಳೆ. ರಂಗನಾಥನ ದೇವಾಲಯ; ೩ ಅಡಿ ಎತ್ತರದ ಗುಡಿಯಲ್ಲಿ ಶೇಷಶಾಯಿಯಾದ ವಿಷ್ಣುವಿನ ಶಿಲ್ಪವಿದೆ. ಮೂಲ ವಿಗ್ರಹ ಹಾಳಾದ ಮೇಲೆ ಹೊಸದಾಗಿ ಮಾಡಿಸಿರುವರು. ನಿಂತ ಭಂಗಿಯಲ್ಲಿರುವ ಲಕ್ಷ್ಮೀಯ ಎರಡು ಮೂರ್ತಿಗಳಿವೆ. ಈ ದೇವಾಲಯದಲ್ಲಿನ ಮೂರ್ತಿಗಳು ಕನಕಗಿರಿ ದೇವಾಲಯದಲ್ಲಿರುವಂತಿವೆ.



ಜಿನ ದೇವಾಲಯ; ಇದೊಂದು ಜೈನ ಬಸದಿಯಾಗಿದೆ ಪದ್ಮಾಸನದಲ್ಲಿ ಕುಳಿತ ಜಿನ ಇಲ್ಲಿದ್ದು ಚೌಕಾಕಾರದಲ್ಲಿರುವ ನವರಂಗವಿದ್ದು ಸಿಂಹ ಕಮಲವಿರು ಭಂಗಿಗಳಿವೆ ಗರ್ಭಗುಡಿಯೊಳಗೆ ಪೀಠ ಮಾತ್ರವಿದೆ.

**ಗಣೇಶ ಗುಡಿ;**



ಗರ್ಭಗುಡಿ ಮಾತ್ರ ಉಳಿದಿದ್ದು ಬಾಗಿಲು ಕಲಾತ್ಮಕತೆಯಿಂದ ಕೂಡಿದೆ. ಸ್ತ್ರೀ ಪುರುಷರ ಚಿಕ್ಕ ಚಿಕ್ಕ ಶಿಲ್ಪಗಳಿವೆ ಧ್ಯಾನಾಸಕ್ತ, ಕುಳಿತ, ನಿಂತ ನಾಟ್ಯ ಭಂಗಿಯಲ್ಲಿರುವ ಮೂರ್ತಿಗಳು ಮನ ಸೆಳೆಯುತ್ತವೆ. ಅರಮನೆ ವಾಲಿ ಬಂಢಾರವು ಶಿಲ್ಪ ಸೌಂದರ್ಯಗಳಿಂದ ಕೂಡಿದೆ. ಇಲ್ಲಿ ಕಾಶಿ ವಿಶ್ವನಾಥೇಶ್ವರ ದೇವಾಲಯ ರಂಗನಾಥ ದೇವಾಲಯ ಜಿನದೇವಾಲಯ ಅರಮನೆಗಳು ನೋಡಲು ಸಿಗುವ ದೇವಾಲಯಗಳಾಗಿವೆ.

**ಆನೇಗುಂದಿ ವಾಲಿ ಕಿಲ್ಲಾ:**

ಇಲ್ಲಿ ಆದಿಶಕ್ತಿ ದೇವತೆಯ ವಾಸಸ್ಥಾನವಿದ್ದು ದುರ್ಗಾದೇವಿಗಾಗಿ ಪ್ರತಿ ದಸರೆಗೊಮ್ಮೆ ಶರನ್ನವರಾತ್ರಿ ನಡೆಯುತ್ತದೆ. ಪುಣ್ಯವಾಚನ, ಗಣಪತಿ ಸ್ತೋತ್ರ, ಕಂಕಣ ಬಂಧನ, ದೇವತಾ ಘಟಸ್ಥಾಪನೆ, ನವರಾತ್ರಿ ಉತ್ಸವ, ಪಟ್ಟಾಭಿಷೇಕಗಳು ನಡೆಯುತ್ತವೆ. ದೇವಿಗೆ ಕುಂಕುಮಾರ್ಚನೆ, ಸಹಸ್ರ ನಾಮಾರ್ಚನೆ, ದುರ್ಗಾ ಸಪ್ತಷತಿ ಪಾರಾಯಣ, ಯಜ್ಞಹೋಮ, ಪೂರ್ಣಾಹುತಿ, ನವಕನ್ಯೆ ಪೂಜೆ, ಶ್ರೀದೇವಿ ಪುರಾಣಗಳು, ಸಂಗೀತ ಪಲ್ಲಕ್ಕಿ ಅಷ್ಟೋತ್ತರ ಕಾರ್ಯಕ್ರಮಗಳು ಎಂದಿನಿಂದಿಲೂ ನಡೆದುಕೊಂಡು ಬಂದಿರುತ್ತವೆ. ಇದರ ಪಕ್ಕದಲ್ಲಿ ಬೆಟ್ಟಕ್ಕೆ ಹೊಂದಿಕೊಂಡಿರುವ ಕೋಟೆಯ ಬಾಗಿಲಿದ್ದು ಒಳಗಡೆ ಹೋದಂತೆ ರಾಜರ ಸಮಾಧಿಗಳು ಪ್ರಾಚೀನ ಭಾವಿ ಈಗಲೂ ಇದ್ದು

ರಾರಾಜಿಸುತ್ತವೆ. ಮುಂದೆ ಸಾಗಿದಲ್ಲಿ ಗುಂಡಕಲ್ಲುಗಳ ಮದ್ಯೆ ಪ್ರಾಚೀನದಲ್ಲಿ ಹುತ್ತು ಹೊಂದಿದ್ದು ಜನ ಈಗಲೂ ಆಳಕ್ಕಿಳಿದು ಇಲ್ಲಿ ಪೂಜೆ ಮಾಡುತ್ತಾರೆ. ಈ ಬೆಟ್ಟವನ್ನು ಏರಿ ನಿಂತು ನೋಡಿದರೆ ಪಂಪಾಸಾಗರ, ಹಂಪೆ, ತುಂಗಭದ್ರೆನದಿ ವೀಕ್ಷಿಸಬಹುದು.

**ಶ್ರೀ ಕನಕಗಿರಿ ಶ್ರೀ ಲಕ್ಷ್ಮೀ ಕನಕಾಚಲಪತಿ ದೇವಾಲಯ**


**ದೂರ ;**

ತಾಲೂಕಿನಿಂದ : ೧೯ ಕಿ.ಮೀ.

ಜಿಲ್ಲೆಯಿಂದ : ೪೫ ಕಿ.ಮೀ



ಕೃಷ್ಣದೇವರಾಯನ ಕಾಲದಲ್ಲಿ ಕನಕಗಿಯ ಪಾಳೇಯಗಾರರಾಗಿದ್ದ ಉಡಿಚನಾಯಕ ಪ್ರೌಢದವರಾಯನ ಕಾಲದಲ್ಲಿ ಪರಸಪ್ಪ ಉಡಿಚನಾಯಕ ಕಾಲದಲ್ಲಿ ಲಕ್ಷೀ ನರಸಿಂಹ ದೇವಾಲಯಗಳು ನಿರ್ಮಾಣಗೊಂಡವು. ಮುಂದಿನ ಪಾಳೇಯ ಗಾರರು ಈಗಿನ ಸ್ಥಿತಿವರೆಗೂ ಕಟ್ಟಿಸಿರುವರು. ೫೪ಅಡಿ ಉದ್ದ ೩೭ ಅಡಿ ಅಗಲವರುವ ಇದು ೯೦ ಅಡಿ ಅಗಲ ೨೦೮ ಅಡಿ ಉದ್ದದ ಪ್ರಾಂಗಣವಿದೆ. ನಾಟ್ಯ ಶಾಲೆ ಮಹಾ ಮಂಟಪವಿದ್ದು ೩೪ ಕಂಬಗಳ ಮೇಲೆ ನಿಂತಿದೆ. ಎರಡು ಭಾಗದಲ್ಲಿ ಇಲ್ಲಿನ ಕಂಬಗಳಿದ್ದು ಹದಿನಾರು ಮುಖಭಾವವಿರುವ ಕಾಲೆತ್ತಿ ನಿಂತಿರುವ ಕುದುರೆಯಾಕಾರದ ಸಿಂಹಾಕಾರದ ಕೆತ್ತನೆಯ ಚಾಚು ಪೀಠಗಳಿವೆ. ಮಂಟಪದಲ್ಲಿ ವಿವಿಧ ಭಂಗಿಯ ಪೌರಾಣಿಕ ಚಿತ್ರಗಳಿವೆ ದ್ರಾವಿಡ ಶಿಖರವಿದ್ದು, ನರಸಿಂಹ ದೇವಾಲಯ ಪಕ್ಕದಲ್ಲಿ ಲಕ್ಷಿ ದೇವಾಲಯವಿದೆ, ದೇವಾಲಯ ಸುತ್ತಲೂ ವಿವಿಧ ರಾಮಾಯಣ ಮಹಾಭಾರತ ಕಥೆ ಬಿಂಬಿಸುವ ಪದ್ಮಾಸನದ ಶಿವ, ಹೊರ ಪ್ರಾಂಗಣದಲ್ಲಿ ಉಡಿಚ ನಾಯಕ, ವೆಂಕಟಪ್ಪ ನಾಯಕ, ಕನಕಪ್ಪ ನಾಯಕ, ಇಬ್ಬರು ರಾಣಿಯರ ಶಿಲ್ಪಗಳಿವೆ. ರಾಜವೇಷ ನಿಲುವಂಗಿ ಧರಿಸಿರುವ ರೀತಿ ನೋಡಿದರೆ ಹೃದಯ ತಟ್ಟುತ್ತವೆ.



ಕನಕಗಿರಿಯಲ್ಲಿ ಶಂಕರಲಿಂಗನ ಗುಡಿ, ನಗರೇಶ್ವರ, ಪಾಂಡುರಂಗ, ಬಸವಣ್ಣ, ಪಾರ್ವತಿ, ವೀರಭದ್ರ, ಯಲ್ಲಮ್ಮ, ಗಜಲಕ್ಷೀ. ಗುಡಿಗಳು ಪ್ರಮುಖವಾಗಿವೆ.

ಇಲ್ಲಿನ ವೆಂಕಟಪತಿ ಬಾವಿ ಹಂಪಿಯ ರಾಣಿಯರ ಸ್ನಾನದ ಗೃಹಕ್ಕಿಂತ ಚೆನ್ನಾಗಿದೆ. ಸುತ್ತಲೂ ಈಶ್ವರ ಪಾರ್ವತಿ ವೆಂಕಟರಮಣರ ಮೂರ್ತಿ ಇವೆ, ಇದು ನೆಲಮಟ್ಟಿದಿಂದ ಕೆಳಗೆ ಇರುವದರಿಂದ ಹತ್ತಿರ ಹೋಗುವವರೆಗೂ ಕಾಣುವದಿಲ್ಲ, ಇಲ್ಲಿಯ ವಿಶೇಷವೆಂದರೆ ಸಿಂಹ ಶಿಲ್ಪದ ಬಾಯಲ್ಲಿ ಗುಂಡುಗಳೂ ಅಲುಗಾಡಲು ಬರುವಂತೆ ಕೆತ್ತಲಾಗಿದ್ದು ಅವುಗಳು ಇತ್ತೀಚೆಗೆ ನಾಶವಾಗಿವೆ, ಕನಕಪ್ಪ ನಾಯಕನ ತಮ್ಮ ವೆಂಕಟಪ್ಪ ನಾಯಕ ನಿರ್ಮಿಸಿದ್ದು ಆತನ ಹೆಸರಿನಿಂದಲೇ ಕರೆಯಲಾಗುವದು. ಈ ಭಾಗದಲ್ಲಿ ಇರುವ ಹೇಮಗುಡ್ಡದಲ್ಲಿ ಕನಕರಾಯ ಗುಡಿ, ಈಶ್ವರಗುಡಿ, ಮತ್ತು ಕೋಟೆಗಳನ್ನು ಮತ್ತು ನವಲಿ ಗಳಲ್ಲಿ ಭೋಗಾಪುರೇಶ್ವರ ದೇವಾಲಯಗಳನ್ನು ನಿರ್ಮಿಸಿದ್ದಾರೆ.

**ಹೇಮಗುಡ್ಡದ ಕೋಟೆ**

**ದೂರ ;**

ತಾಲೂಕಿನಿಂದ : ೧೮ ಕಿ.ಮೀ.

ಜಿಲ್ಲೆಯಿಂದ : ೩೩ ಕಿ.ಮೀ



ಗಂಗಾವತಿಯಿಂದ ೧೮ ಕಿ.ಮೀ. ದೂರದಲ್ಲಿದೆ ಇದು ಕಾಟನ ದುರ್ಗ, ಯಮನದುರ್ಗ, ಬಸವನ ದುರ್ಗ, ಹಂಪಸ ದುರ್ಗ, ಕಮ್ಮಟ ದುರ್ಗ, ಬಿಸಿಲೆಪ್ಪನ ದುರ್ಗ, ಹುಚ್ಚಮಗಿ ದುರ್ಗ, ಚಂದ್ರಗಿರಿ ದುರ್ಗಗಳು ಆಗ ಪ್ರಸಿದ್ಧಿಯಲ್ಲಿದ್ದು ಯಮನ ದುರ್ಗ ಅಥವಾ ಎಮ್ಮಿಗುಡ್ಡನ ಕೋಟೆಯಲ್ಲಿ ಈ ಭಾಗದಲ್ಲಿನ ಪರಶುರಾಮನ ಜ್ಯೋತಿಗೆ ಈಗಲೂ ಎಣ್ಣೆಹಚ್ಚುವ ಪದ್ಧತಿಯಿದ್ದು ದುರ್ಗಾದೇವಾಲಯ ಇಲ್ಲಿನ ಆದಿದೇವತೆ. ಇಲ್ಲಿನ ಪಶ್ಚಿಮಕ್ಕೆ ಶಾಸನವಿದ್ದು, ಮಹಿಷಾಸುರ (ದುರ್ಗಾದೇವಿ) ಮರ್ದಿನಿ, ಕನಕಾಚಲಪತಿ, ಲಕ್ಷ್ಮಿನರಸಿಂಹ ದೇವಾಲಯ. ಕ್ರಿ.ಶ. ೧೫೧೦-೧೫೩೦ ರಲ್ಲಿ ಕನಕಗಿರಿ ಪಾಳ್ಯಯಗಾರ ಉಡಚನಾಯಕನ ಅವಧಿಯಲ್ಲಿ ೧೫ನೇ ಶತಮಾನದ ಈ ಕೋಟೆಯನ್ನು ನಿರ್ಮಿಸಲಾಗಿದೆ. ಸುರುಪುರದ ದೊರೆ ಪಿತಾಂಬರಿ ಬಹರಿಪಿಡ್ಡನಾಯಕನಿಗೆ (೧೭೮೮-೧೭೯೯) ಮೊಗಲ ಅರಸ ಉಪಟಳ ನೀಡುತ್ತಿದ್ದುದರಿಂದ ಒಂದು ವರ್ಷದವರೆಗೆ ಗುಪ್ತವಾಗಿ ಈ ಕೋಟೆಯಲ್ಲಿ ಈತನನ್ನು ಅಡಗಿಸಿ ಇಡಲಾಗಿತ್ತು. ಮುಂದಿನ ಕನಕಗಿರಿ ಪಾಳ್ಯಯಗಾರ ಹಿರಿಯ ನಾಯಕ ಉದ್ದಟತನದವನಾಗಿದ್ದರಿಂದ ಹೈದರಾಬಾದ ನವಾಬ ಈತನನ್ನು ತೋಪಿನ ಬಾಯಿಗೆ ಕಟ್ಟಿ ಸ್ಫೋಟಿಸಿ ಕೊಂದನು. ಇತರ ದೇವಾಲಯಗಳು, ಆಂಜನೇಯ ದೇವಾಲಯ, ಸೈನಿಕರು ಸೇವಕರು ವಾಸಿಸುತ್ತಿದ್ದ ಮನೆಯ ಅವಶೇಷಗಳು ಮಡಿಕೆ, ಗಡಿಗೆ ಒಳಗೊಂಡು ಕಪ್ಪು ಕೆಂಪು ಪಾತ್ರೆ ಚೂರುಗಳು, ಮಣ್ಣಿನ ಮಣಿ ಇಲ್ಲಿ ದೊರೆಯುತ್ತವೆ.

***